ಗಳ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಮನೆಯಲ್ಲಿ ಮಹತ್ವವಾದ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಇದನ್ನು ಜಂಟಿ ಸಲಹಾ ಸಮಿತಿಗೆ ಕೊಡಬೇಕೆನ್ನುವ ವಿಚಾರಕ್ಕೆ ಸರ್ಕಾರ ಬಂದಿದೆ. ಹತ್ತಾರು ವರ್ಷಗಳಿಂದ ಉಳಿದಿದ್ದಂತಹ ಸಮಸ್ಯೆಯನ್ನು ಒಂದೇ ಸಾರಿ ಬಗೆಹರಿಸುವುದಕ್ಕೆ ಆಗದೆಯಿದ್ದಿಲ್ಲ. ಆ ವಿಚಾರವನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮುಂದಿನ ಅಧಿವೇಶನ ಸೇರುವುದರೊಳಗೆ ಒಂದು ತಿಂಗಳು ವಂಚಿತವಾಗಿ ವರದಿಯನ್ನು ಕೊಡಲಿಕ್ಕೆ ಹೇಳುತ್ತೇನೆ. ಆ ವರದಿಯ ಆಧಾರದ ಮೇಲೆ ಮುಂದಿನ ಅಧಿವೇಶನದಲ್ಲಿ ಈ ಮಸೂದೆಯನ್ನು ಪಾಸ್ ಮಾಡುವ ಭರವಸೆಯನ್ನು ಕೊಡುತ್ತೇನೆ. ಪಾಸ್ ಮಾಡತಕ್ಕ ಕೆಲಸ ತಮ್ಮದು. ಅಲ್ಲಿಯವರೆಗೆ ಯಾರು ಭೂಮಿಯನ್ನು ಸಾಗು ಮಾಡುತ್ತಿದ್ದಾರೆ ಅವರನ್ನು ಆ ಭೂಮಿಯಿಂದ ಹೊರಗೆ ಹಾಕುವುದಿಲ್ಲವೆನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಮಾತನಾಡಿದ ಮೇಲೆ ಎರಡು ವಿಷಯಗಳನ್ನು ಎತ್ತಿದ್ದಾರೆ. ಈಗ ನಮಗೆ ಏನು ಸಂಶಯ ಬಂದಿದೆ ಅಂದರೆ, ಬೊದಲು ಹರಿಜನ-ಗಿರಿಜನರು ಭೂಹೀನರು ನಮ್ಮ ಹತ್ತಿರ ಬಂದಿದ್ದರು ಮಾತನಾಡಿದರು ಎಂದು ಹೇಳಿದರು ಅದು ಸರಿ. ಆಮೇಲೆ ಕಾಫಿಪ್ಲಾಂಟರುಗಳು ತಮ್ಮ ಪ್ಲಾಂಟೇಷನ್ ಕೊನೆಯೊಳಗೆ ಇರತಕ್ಕ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ. ಸಂಶಯ ಹೇಗೆ ಬರುತ್ತದೆ ಅಂದರೆ ಎಲ್ಲರಿಗೂ ಒಂದೇ ರೀತಿಯಲ್ಲಿ ಕಾನೂನು ಮಾಡಿದರೆ ತಕರಾರು ಬರುತ್ತದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸುವುದು ಬೇಡ ಅಂದರೆ ಚರ್ಚೆ ಮಾಡೋಣ.

ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲದ ಚರ್ಚೆ

ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯತಿಗಳ ಸಂಬಂಧದಲ್ಲಿ ಕ್ಷೇತ್ರಗಳ ವಿಂಗಡಣೆ ಹಾಗೂ ಮಂಡಲ ಪಂಚಾಯತಿ ಕ್ಷೇತ್ರಗಳಿಗೆ ಮೀಸಲಿಡುವಾಗ ವಿರೋಧ ಪಕ್ಷದ ಜೊತೆಯಲ್ಲಿ ನ್ಯಾಯಸಮ್ಮತ ಸೂತ್ರವನ್ನು ಅನುಸರಿಸದೆ ಏಕಪಕ್ಷೀಯವಾಗಿ ತೀರ್ಮಾನ ಮಾಡಿರುವ ಬಗ್ಗೆ ಚರ್ಚೆಯನ್ನು ಮುಂದುವರಿಸುವುದು,

ಶ್ರೀ ಎಸ್. ಬಂಗಾರಪ್ಪ.—ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದೇ ಇರುವುದರಿಂದ ಅವರು ಬರುವವರೆಗೆ ಅವರಿಗಾಗಿ ಕಾಯಬೇಕಾಗಿಲ್ಲ. ಕಾನೂನು ಪ್ರಕಾರ ಬೇರೆ ವಿಷಯ ತೆಗೆದುಕೊಳ್ಳಬೇಕು,

ಉಪಾಧ್ಯಕ್ಷರು.—ಒಂದು ನಿಮಿಷದಲ್ಲಿ ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೆ ನಾನು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆಯುವಾಗ ನಾನು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಆ ಕಡೆ ಕುಳಿತಿರತಕ್ಕವರು ಈ ಕಡೆ ಕುಳಿತಿರತಕ್ಕವರು ಎಲ್ಲ ಮಾನ್ಯ ಸದಸ್ಯರುಗಳು ಭಾಗವಹಿಸಿದ್ದಾರೆ. ನಾನು ಮಾನ್ಯ ಸದಸ್ಯರುಗಳು ಹೇಳಿರತಕ್ಕ ವಿಚಾರವನ್ನು ಪುನಃ ರಿಪೀಟ್ ಮಾಡುವುದಿಲ್ಲ. ತಮಗೆಲ್ಲ ಗೊತ್ತಿರುವ ಹಾಗೆ ಸರ್ಕಾರದವರು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎನ್ನುವ ವಾದವನ್ನು ಮುಂದಿಟ್ಟು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಚುನಾವಣೆಯನ್ನು ನಡೆಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಕ್ಷೇತ್ರಗಳ ವಿಂಗಡಣೆ ಮಾಡತಕ್ಕ ಕಾಲದಲ್ಲಿ ಅನ್ಯಾಯವಾಗಿದೆ ಎನ್ನತಕ್ಕ ಮಾತನ್ನು ನಮ್ಮ ಪಕ್ಷದ ಸದಸ್ಯರುಗಳು ಮಾತ್ರ ಹೇಳಿಲ್ಲ, ತಮ್ಮ ಪಕ್ಷದ ಅನೇಕ ಸದಸ್ಯರುಗಳು ಸಹ ಹೇಳಿದ್ದಾರೆ ನಾನು ಇಲ್ಲಿ ಕುಳಿತುಕೊಂಡಿರುವಾಗ ನನಗೂ ಅನ್ಯಾಯವಾಗಿದೆ ಅದನ್ನು ಸರಿಪಡಿಸಿ ಎಂದು ಹೇಳುತ್ತಿದ್ದರು. ಅದರ ಬಗ್ಗೆ ಪುನಃ ವಿಚಾರ ಮಾಡಬೇಕೆಂದು ಹೇಳುತ್ತಿದ್ದರು ಕ್ಷೇತ್ರಗಳ ವಿಂಗಡಣೆ ಮಾಡುವಾಗ ಏನೋ ಅಲ್ಪಸ್ವಲ್ಪ ಹೆಚ್ಚು ಕಮ್ಮಿ ಆದರೆ ಅದು ಬೇರೆ ಇದು ಮನಸೋಯಿಚ್ಛೆ ಆಗಿರತಕ್ಕ ಕೆಲಸ. ಈ ಕೆಲಸ ಅನೇಕ ಕಡೆಗಳಲ್ಲಿ ಆಗಿದೆ. ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಸರಿಪಡಿಸಬೇಕು ಇಲ್ಲದಿದ್ದರೆ ಅಧಿಕಾರ ವಿಕೇಂದ್ರೀಕರಣ ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆದರಿಂದ ಕೆಟ್ಟ ಫಲಿತಾಂಶ ಬಂದು ಸಮಾಜದಲ್ಲಿ ಭಾರಿ ಪರಿಣಾಮ ಬೀರತಕ್ಕದ್ದು ಇದೆ. ಇದನ್ನು ಸರಿಪಡಿಸಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿಮ್ಮ

ಪಕ್ಷದವರೇ ಇದು ಸರಿಯಾಗಿಲ್ಲ ಇದನ್ನು ಸರಿಪಡಿಸಿ ಎಂದು ಹೇಳಿದರೆ ಮತ್ತೊಂದು ಸಾರಿ ನೋಟಿಫಿಕೇಶನ್ ಇಷ್ಯು ಮಾಡಬೇಕಾಗುತ್ತದೆ.

ಪಿ.ಪಿ.ಎಂ.

ಇವತ್ತು ನಿಮ್ಮ ಪಕ್ಷದಲ್ಲೂ ಈ ರೀತಿಯ ಚರ್ಚೆ ನಡೆದಿದೆ. ನಿಮ್ಮ ಪಕ್ಷದ ಸದಸ್ಯರೂ ಕೂಡ ಇದರ ಬಗ್ಗೆ ಚರ್ಚೆ ನಡೆಯಲಿ ಎಂಬ ಭಾವನೆಯನ್ನು ಉಳ್ಳವರಾಗಿದ್ದಾರೆ. ಕ್ಷೇತ್ರಗಳ ಪುನರ್ವಿಂಗಡಣೆ ಮಾಡುವಂತಹ ಕೆಲಸವನ್ನು ತಾವು ದಯಮಾಡಿ ಹಿಂತೆಗೆದುಕೊಳ್ಳಿ. ಇದಕ್ಕಾಗಿ ಸದನದ ಸಮಿತಿಯನ್ನು ಮಾಡಬೇಕು. ಆ ಒಂದು ಅಭಿಪ್ರಾಯವನ್ನು ಏನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅದನ್ನು ಒಪ್ಪಿಕೊಳ್ಳಿ. ತಕ್ಷಣವೇ ನವಂಬರ್ ತಿಂಗಳಲ್ಲಿ ಚುನಾವಣೆಯನ್ನು ಮಾಡಿ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಇದನ್ನು ಪ್ರಕಟಣೆ ಮಾಡಿದ್ದಾರೆ. ನಮ್ಮ ಪಕ್ಷ ಚುನಾವಣೆಯನ್ನು ಎದುರಿಸುವುದಕ್ಕೆ ಸಿದ್ಧವಿದೆ ಅದರ ಬಗ್ಗೆ ತಮಗೆ ಆನುಮಾನ ಬೇಕಾಗಿಲ್ಲ. ಮತ್ತು ಈಗ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ಕ್ರಮವನ್ನು ಕೈಗೊಳ್ಳಿ ಎಂಬುದಾಗಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—(ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯಿತಿ ಕ್ಷೇತ್ರಗಳ ಪುನರ್ವಿಂಗಡಣೆಯ ಬಗ್ಗೆ ಸುದೀರ್ಘವಾಗಿ ಪ್ರತಿ ಪಕ್ಷದ ಮಿತ್ರರು ಚರ್ಚೆ ಮಾಡಿದ್ದಾರೆ. ಅವರು ಚರ್ಚೆ ಮಾಡುವಂತಹ ಕಾಲದಲ್ಲಿ ಳಿ.ಟ ಅಪಾದನೆಗಳನ್ನೂ ಕೂಡ ಮಾಡಿದ್ದಾರೆ. ಒಂದು ಇದಕ್ಕೆ ಯಾವ ರೀತಿಯ ನೀತಿ ನಿಯಮಗಳನ್ನು ಆಧರಿಸಿ ಮಾಡಿದ್ದೀರಿ ? ನೀತಿ ನಿಯಮ ಇಲ್ಲದೆ ಮನಸ್ಸೋಚ್ಛೆಯಾಗಿ ಮಾಡಿದ್ದೀರಿ ಎನ್ನತಕ್ಕಂತಹ ಆಪಾದನೆಯನ್ನು ಮಾಡಿದ್ದಾರೆ. ಮತ್ತೆ ಕೆಲವು ಉದಾಹರಣೆಗಳನ್ನು ಕೊಟ್ಟು ಅನೇಕ ಪ್ರತಿಪಕ್ಷದ ಸದಸ್ಯರು ಎಲ್ಲಿ ಇದ್ದಾರೆ ಅವರ ಕ್ಷೇತ್ರದಲ್ಲಿ ಮೀಸಲಾತಿ ಕ್ಷೇತ್ರಗಳನ್ನಾಗಿ ಮಾಡಿದ್ದೀರಿ. ಇದರಲ್ಲಿ ನಿಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಮಾಡಿದ್ದೀರಿ ಎನ್ನತಕ್ಕಂತಹ ಆಪಾದನೆಯನ್ನು ಸಹ ಮಾಡಿದ್ದಾರೆ. ಮೂರನೆಯದಾಗಿ ನೀವು ಪೂರ್ಣವಾಗಿ ಈ ಸದನದ ಸದಸ್ಯರಿಗೆ ಕೊಟ್ಟಂತಹ ಆಶ್ವಾಸನೆಯನ್ನು ಮರೆತು ನಿಮ್ಮ ಮನಸ್ಸೋಚ್ಛೆಯಾಗಿ, ಕೊಟ್ಟಂತಹ ಆತ್ಮಾಸನೆಯನ್ನು ಈಡೇರಿಸದೆ ವಚನಭ್ರಷ್ಟರಾಗಿದ್ದೀರಿ ಎಂಬುದಾಗಿ ಶ್ರೀಮಾನ್ ಶ್ರೀನಿವಾಸ್ ರವರು ನಿನ್ನೆ ಹೇಳಿದರು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಮಾಡಿದ್ದು ಸತ್ಯ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಖರ್ಗೆಯವರು ಹೇಳಿದ್ದೆಲ್ಲಾ ಸತ್ಯವಾದುದು.

ಶ್ರೀ ಮಲ್ಲಿಕಾರ್ಜುನ. ಎಂ. ಖರ್ಗೆ.—ಕನ್‌ಸ್ಟಲ್ಟ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆದರಂತೆ ನಮ್ಮನ್ಯಾರನ್ನೂ ಕನ್ಸಲ್ಟ್ ಮಾಡಲಿಲ್ಲ ಅಂತ ಹೇಳಿದ್ದೇವೆ. ಅದನ್ನು ಬೇಕಾದರೆ ಕೇಳಿಕೊಳ್ಳಿ ನಿಮ್ಮ ಅಧಿಕಾರಿಗಳ ಹತ್ತಿರ.

ಶ್ರೀ ಅಬ್ದುಲ್ ನಜೀರ್ ಸಾಬ್,—ಅದನ್ನು ಹೇಳುತ್ತೇನೆ. ದಯಮಾಡಿ ಕೇಳಿ. ಈ ಒಂದು ಶಾಸನದಲ್ಲಿ ಸಾಕಷ್ಟು ನಿಸ್ಪಕ್ಷಪಾತವಾಗಿ ಆಗಬೇಕು, ಇದರಲ್ಲಿ ರಾಜಕೀಯ ಒತ್ತಡಗಳು ಬರಬಾರದು, ಇದು ಒಂದು ಜನತೆಯ ಸಂಸ್ಥೆಗಳಾಗಿ ನಿರ್ಮಾಣವಾಗಬೇಕು ಎನ್ನತಕ್ಕಂತಹ ಸದುದ್ದೇಶ ಸರ್ಕಾರಕ್ಕೆ ಇದ್ದುದರಿಂದಲೇ ಪ್ರತಿಯೊಂದು ಶಾಸನದಲ್ಲೂ ಮೇಲ್ಮನವಿಗೆ ಅಧಿಕಾರ ಸರ್ಕಾರವೇ ಇಟ್ಟುಕೊಂಡಿದ್ದರೂ ಈ ಒಂದು ಶಾಸನದಲ್ಲಿ ಸರ್ಕಾರ ಇಟ್ಟುಕೊಂಡಿಲ್ಲ. ಆ ಒಂದು ಅಧಿಕಾರವನ್ನು ಕೋರ್ಟುಗಳಿಗೆ ಬಿಟ್ಟುಕೊಟ್ಟಿದೆ. ಕೊನೆಗೆ ಯಾವುದೇ ಕೆಲಸವನ್ನು ಮಾಡಬೇಕಾದರೂ ಜನತಂತ್ರದಲ್ಲಿ ವಿಶ್ವಾಸವನ್ನು ಇಟ್ಟುಕೊಂಡು ಇರತಕ್ಕಂತಹ ಒಂದು ಸೂತ್ರವನ್ನು ಉಪಯೋಗಿಸಿಕೊಂಡಿದ್ದೇವೆ. ಅದು ಯಾವುದೆಂದರೆ, ಅಧಿಕಾರ ಸೂತ್ರದ ಮೂಲಕವೇ ಇದನ್ನು ಮಾಡಬೇಕಾಗುತ್ತದೆ. ಇದನ್ನು ನಾವೂ ನೀವೂ ಮಾಡುವುದಕ್ಕಾಗುವುದಿಲ್ಲ. ಪಾರ್ಲಿಮೆಂಟ್ ಹಾಗೂ ಅಸೆಂಬ್ಲಿ ಕ್ಷೇತ್ರಗಳನ್ನು ಮಾಡುವಾಗ ಒಂದು ಸಮಿತಿಯನ್ನು ಮಾಡಿದ್ದೆವು. ಅದನ್ನು ಮಾಡಿದಾಗ ಪೂರ್ಣವಾದ ತೃಪ್ತಿಯಾಗದಿರುವುದು ತಮಗೆಲ್ಲಾ ಗೊತ್ತಿರಬಹುದು. ಆದರ ಬಗ್ಗೆ ಈ ಸದನದಲ್ಲೇ ದೀರ್ಘವಾಗಿ ಚರ್ಚೆಯಾಗಿದೆ. ಡೀ-ಲಿಮಿಟೇಷನ್ ಕಮಿಟಿ ಅಂತ ಏನು ಮಾಡಿದ್ದೆವು, ಆ ಕಮಿಟಿ ಉತ್ತರಹಳ್ಳಿ ಅಸೆಂಬ್ಲಿ ಕ್ಷೇತ್ರವನ್ನು ಮಾಡಿದ್ದಾರೆ.

ಅದನ್ನ ಯಾವ ರೀತಿ ಮಾಡಿದ್ದಾರೆಂಬುದು ನಿಮಗೂ ಗೊತ್ತಿದೆ. ಬೆಂಗಳೂರು ನಗರ ಸುತ್ತ ಹಸಿರು ಪಟ್ಟಿ ಬಂದ ಹಾಗೇ ಈ ಒಂದು ಕ್ಷೇತ್ರವನ್ನು ಮಾಡಿದ್ದಾರೆ. ಅನೇಕ ಕ್ಷೇತ್ರಗಳು ಇದೇ ರೀತಿಯಾಗಿದೆ. ಮೈಸೂರು ಜಿಲ್ಲೆಯಲ್ಲೂ ಕೂಡ ಇದೇ ರೀತಿಯಾಗಿದೆ. ಆದ್ದರಿಂದ ಎಲ್ಲರಿಗೂ ತೃಪ್ತಿಯಾಗುವಂತಹ ಕೆಲಸ ನಡೆದಿದೆ ಅಂತ ನಾನು ಹೇಳುವುದಿಲ್ಲ ಆದರೆ ಇದರಲ್ಲಿ ಈ ರೀತಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದೀರಿ ಎಂಬುದಾಗಿ ನಮ್ಮ ಶಾಸಕ ಮಿತ್ರರಾರು ನನಗೆ ಎತ್ತಿ ತೋರಿಸಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ನಾನು ಅದನ್ನೇ ಹೇಳಿದ್ದೇನೆ. ಜಿಯಾಗ್ರಫಿಕಲ್ ಕಂಟಿನ್ಯೂಟಿ ಇಲ್ಲ. ಪಾಪುಲೇಷನ್ ನೋಡಿಲ್ಲ. ಡಿಸ್ಟೆನ್ಸ್ ನೋಡಿಲ್ಲ. ಇದನ್ನೆಲ್ಲಾ ಹೇಳಿದ್ದೇನೆ. ಇನ್ನೇನು ಹೇಳಬೇಕು ? ಅದು ಮತ್ತೆ ಇನ್ಯಾವ ರೂಲು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಶ್ರೀಮಾನ್ ಮಲ್ಲಿಕಾರ್ಜುನ್ ಎಂ. ಖರ್ಗೆಯವರು ಹೇಳಿದ್ದೆಲ್ಲಾ ಸತ್ಯ ನಾವು ಹೇಳಿದ್ದೆಲ್ಲಾ ಸರಿಯಲ್ಲ. ಒಂದೊಂದು ಸಾರಿ ಅವರಿಗೆ ನಾನು ಹೇಳಿದ್ದು ಅರ್ಥವಾಗುವುದಿಲ್ಲ.

ಉಪಾಧ್ಯಕ್ಷರು.—ಈ ರೀತಿ ಮಧ್ಯೆ ಮಧ್ಯೆ ಎದ್ದು ಮಾತನಾಡಿದರೆ ಸಚಿವರು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಸಚಿವರ ಉತ್ತರ ಪೂರ್ಣವಾಗಿ ಮುಗಿದ ಮೇಲೆ ವಿವರಣೆಯನ್ನು ಮಾನ್ಯ ಸದಸ್ಯರು ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಮಧ್ಯದಲ್ಲಿ ಯಾರೂ ಕೇಳಬೇಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—೨೫ ಪರ್ಸೆಂಟ್ ಮಹಿಳೆಯರಿಗಾಗಿ ಕೊಡಬೇಕು ಅಂತ ಇದ್ದರೆ ಅವರಿಗೆಲ್ಲಾ ಕೊಟ್ಟೇ ಕೊಡಬೇಕಲ್ಲ. ಕೊಡುವುದಕ್ಕಾಗುವುದಿಲ್ಲ ಅಂತ ಹೇಳುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಅಮರನಾಥ ಶೆಟ್ಟಿಯವರ ಕ್ಷೇತ್ರದಲ್ಲಿ ಸಾಲಕ್ಕೂ ರಿಸರ್ವೇಷನ್ ಅಂತ ಮಾಡಿದ್ದೀರಿ. ಇನ್ನೊಬ್ಬರದ್ದು ಮೂರನ್ನೂ ರಿಸರ್ವೇಷನ್ ಅಂತ ಮಾಡಿದ್ದೀರಿ. ಇದು ಆಗಬಾರದು ಅಂತ ನಾವು ಹೇಳುತ್ತಿರುವುದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ಸತ್ಯ ಅಲ್ಲ. ತಪ್ಪು ಮಾಹಿತಿಯಿಂದ ಆ ರೀತಿ ತಾವು ಹೇಳುತ್ತಿರಬಹುದು. ನನ್ನ ಹತ್ತಿರ ಅಂಕಿ ಅಂಶಗಳು ಇರುವಾಗ ಅದನ್ನು ಹೇಳಿದರೆ ಅದು ಏಕೆ ಸತ್ಯ ಆಗಬಾರದು ? ನೀವು ಹೇಳುವುದು ಸತ್ಯ ಅಂತ ನನಗೆ ಸರಿಯಾಗಿ ಮನವರಿಕೆಯಾಗಬೇಕಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಹೇಳುವುದು ಮಹಿಳೆಯರಿಗಾಗಿ ಮೀಸಲು ಎಂಬುದು ಮೊನ್ನೆ ಸಪರೇಟ್ ಬಾಕ್ಸ್‌ನಲ್ಲಿ ಬಂದಿತ್ತು. ಇದನ್ನೂ ಕೂಡ ಅದೇ ಬಾಕ್ಸ್‌ನಲ್ಲಿಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.— ಅದು ಯಾವ ರೀತಿ ಬರುತ್ತದೋ ಅದು ಬೇರೆ, ಆದರೆ ನಾನು ಹೇಳುವುದು ನನ್ನ ಕರ್ತವ್ಯ. ಕ್ಷೇತ್ರಗಳ ಪುನರ್‌ವಿಂಗಡಣೆಯಾಗಬೇಕಾದರೆ, ಜಿಲ್ಲಾಧಿಕಾರಿಗಳಿಗೆ ಸರ್ಕಾರ ಕೆಲವೊಂದು ಆದೇಶವನ್ನು ನೀಡಬೇಕು. ಅವುಗಳನ್ನು ಪುನರ್‌ವಿಂಗಡಣೆ ಮಾಡುವಾಗ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಡಬೇಕಾದರೆ, ಯಾವ್ಯಾವ ನಿರ್ದೇಶನಗಳನ್ನು ಕೊಡಬೇಕೆಂಬುದನ್ನು ಯೋಚನೆ ಮಾಡಿ, ವೈಜ್ಞಾನಿಕವಾದ ಕೆಲವೊಂದು ಸೂತ್ರಗಳನ್ನು ಅಳವಡಿಸಿ ನಾವು ಅವರಿಗೆ ನಿರ್ದೇಶನಗಳನ್ನು ಕೊಟ್ಟಿದ್ದೇವೆ. ೧೫೯೦ ಮಂಡಲಗಳು ನಿರ್ಮಾಣವಾಗಬೇಕು. ಅದರಲ್ಲಿ ೭೬೦-೬೫ ಮಂಡಲಗಳ ತಕರಾರೇ ಇಲ್ಲ. ಏಕೆಂದರೆ ಅದರಲ್ಲೆ ಹೇಳಿದ್ದೇವೆ. ಪ್ರತಿ ಹೋಬಳಿ ಹೆಡ್‌ಕ್ವಾರ್ಟರ್ಸ್‌ಗಳನ್ನು ಮಂಡಲಗಳ ಹೆಡ್‌ಕ್ವಾರ್ಟರ್ಸನ್ನಾಗಿ ಮಾಡಬೇಕು ಅಂತ ಮಾಡಿದ್ದೇವೆ. ಅದರ ಪ್ರಕಾರ ೭೮೦ ಮಂಡಲಗಳ ಬಗ್ಗೆ ಸಮಸ್ಯೆಯೂ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇನ್ನುಳಿದ ೧೫೦೦ ಹಳ್ಳಿಗಳಲ್ಲಿ ಮಂಡಲಗಳ ಕೇಂದ್ರಸ್ಥಳಗಳನ್ನು ಮಾಡಬೇಕು. ಆ ರೀತಿಯ ಕೇಂದ್ರ ಸ್ಥಳಗಳನ್ನು ಯಾವ್ಯಾವುವು ಆಗಬೇಕು ಎಂಬುದರ ಬಗ್ಗೆ ಕೆಲವೊಂದು ಕ್ರೈಟೀರಿಯಂವನ್ನು ಇಟ್ಟುಕೊಂಡಿದ್ದೇವೆ. ಆ ಹಳ್ಳಿಗಳಲ್ಲಿ ಎಲ್ಲ ರೀತಿಯ ಪೂರಕ ವ್ಯವಸ್ಥೆ ಇರಬೇಕು. ರಸ್ತೆ, ಕುಡಿಯುವ ನೀರಿನ ಸೌಕರ್ಯ, ಆಸ್ಪತ್ರೆ, ಇಂತಹ ಪೂರಕ ವ್ಯವಸ್ಥೆಗಳಿರಬೇಕು. ಪೂರಕ ವ್ಯವಸ್ಥೆಗಳನ್ನು ಗಣನೆಗೆ ತೆಗೆದುಕೊಂಡರೂ ಸಾಧ್ಯವಾದ ಮಟ್ಟಿಗೆ ಆದು ಆ ಹಳ್ಳಿಗಳ ಮಧ್ಯದಲ್ಲಿರಬೇಕು. ಅಂದರೆ ಆ ಹಳ್ಳಿ ಸುತ್ತಮುತ್ತ ಹಳ್ಳಿಗಳ ಸಂಪರ್ಕ ಇರತಕ್ಕಂತಹ ವ್ಯವಸ್ಥೆ ಅಲ್ಲಿರಬೇಕು. ಮತ್ತು ಜನಸಂಖ್ಯೆ ಕೂಡ ಆಧಾರವಾಗಿರಬೇಕು, ಪೂರಕ ವ್ಯವಸ್ಥೆ ಇದ್ದರೂ ಕೂಡ ಹೆಚ್ಚು ಜನಸಂಖ್ಯೆ ಇಲ್ಲದಿದ್ದಲ್ಲಿ, ಹೆಚ್ಚು

ಜನಸಂಖ್ಯೆ ಇರತಕ್ಕಂತಹ ಹಳ್ಳಿಯನ್ನು ಕೇಂದ್ರಸ್ಥಳವನ್ನಾಗಿ ಮಾಡಬೇಕು. ಈ ಒಂದು ಸೂತ್ರವನ್ನು ಮಂಡಲಗಳ ರಚನೆ ಮಾಡುವಂತಹ ಕಾಲದಲ್ಲಿ ಆಧಾರವಾಗಿಟ್ಟುಕೊಂಡು ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದೇವೆ. ಇದನ್ನು ಕೊಡುವಾಗ ಈ ಶಾಸನದಲ್ಲಿ ೮ ರಿಂದ ೧೨ ಸಾವಿರ ಜನಸಂಖ್ಯೆಗೆ ಒಂದು ಮಂಡಲ ಮಾಡಬೇಕು ಅಂತ ಹೇಳಿದ್ದೆವು. ಆವಾಗ ಏನಾಗುತ್ತದೆ ಎಂದರೆ ಒಂದೊಂದು ಜಿಲ್ಲೆಯಲ್ಲೂ ವ್ಯತ್ಯಾಸವಾಗುವುದಕ್ಕೆ ಅವಕಾಶವಾಗುತ್ತದೆ. ಒಂದೊಂದು ೮ ಸಾವಿರ, ೯ ಸಾವಿರ, ೧೦ ಸಾವಿರ ಹಾಗೂ ೧೧ ಸಾವಿರ ಹೀಗೆ ತಲಾವಾರು ಮಂಡಲಗಳು ಆಗುವುದು ಬೇಕಾಗಿಲ್ಲ. ನಾಳೆ ದಿವಸ ಆಡಳಿತಾತ್ಮಕವಾದ ವ್ಯವಸ್ಥೆಯನ್ನು ಕೊಡತಕ್ಕಂತಹ ಕಾಲದಲ್ಲಿ ಪೂರಕ ವ್ಯವಸ್ಥೆಗೆ ಹಣದ ವ್ಯವಸ್ಥೆಯನ್ನು ಕೊಡುವಾಗಲೂ ಕೂಡ ಸಮಾನಾಗಿರಬೇಕು ಎಂಬ ಉದ್ದೇಶದಿಂದ ಯೂನಿಯಮ್ ಜಿಲ್ಲೆಗಳಲ್ಲಿ ಎಷ್ಟೆಷ್ಟು ಜನಸಾಂದ್ರತೆ ಇದೆ ಎಂಬುದನ್ನು ಆಧಾರವಾಗಿಟ್ಟುಕೊಂಡು ನಾವು ಹೀಗೆ ಮಾಡಿದರೆ ಸರಿ ಅಂತ ಒಂದು ನಿರ್ದೇಶನವನ್ನು ಅವರಿಗೆ ಕೊಟ್ಟಿದ್ದೇವೆ. ಅದರ ಪ್ರಕಾರ ಮಲೆನಾಡು ಪ್ರದೇಶದಲ್ಲಿ ೪ ಸಾವಿರದಿಂದ ೬ ಸಾವಿರಕ್ಕೆ ಒಂದು ಮಂಡಲವನ್ನಾಗಿ ಮಾಡಬೇಕು ಎಂತಲೂ ಮತ್ತು ಬಿಜಾಪುರ, ಗುಲ್ಬರ್ಗ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ೮ ಸಾವಿರಕ್ಕೆ ಒಂದು ಮಂಡಲವಾಗುತ್ತದೆ ಎಂದು ಜನಸಾಂದ್ರತೆಯ ಸೂತ್ರವನ್ನು ಆಧಾರವಾಗಿಟ್ಟುಕೊಂಡು ಮಾಡಬೇಕೆಂದು ಹೇಳಿದ್ದೇವೆ. ಆದರಲ್ಲಿ ೫ ಪರ್ಸೆಂಟ್ ಆ ಕಡೆ ೫ ಪರ್ಸೆಂಟ್ ಈ ಕಡೆ ಹೆಚ್ಚು ಕಡಿಮೆ ಮಾಡಬಹುದು ಎಂಬುದಾಗಿಯೂ ಕೂಡ ಆದೇಶವನ್ನು ನೀಡಿದ್ದೇವೆ. ಬಯಲುಸೀಮೆ ಪ್ರದೇಶದಲ್ಲಿ ೮ ಸಾವಿರದಿಂದ ೧೦ ಸಾವಿರದವರೆಗೆ ಒಂದು ಮಂಡಲವನ್ನು ಮಾಡಬೇಕೆಂತಲೂ, ಮಲೆನಾಡು ಪ್ರದೇಶದಲ್ಲಿ ೪ ಸಾವಿರದಿಂದ ೬ ಸಾವಿರದವರೆಗೆ ಒಂದು ಮಂಡಲವನ್ನು ಮಾಡಬೇಕೆಂತಲೂ ಆದೇಶವನ್ನು ನೀಡಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ ಎಲ್ಲ ಕಡೆ ಮೊಟ್ಟ ಮೊದಲು ಸಭೆಗಳೇ ಆಗಲಿಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಮಂಡಲಗಳ ರಚನೆಗೆ ನಾವು ಕೊಟ್ಟ ನಿರ್ದೇಶನ ಇದು. ಮತ್ತೆ ಮಂಡಲಗಳು ರಚನೆಯಾದ ಮೇಲೆ ಜಿಲ್ಲಾ ಪರಿಷತ್ತು ರಚನೆಯಾಗಬೇಕಾದರೆ, ಅಲ್ಲಿ ಮೀಸಲಾತಿಯನ್ನು ಆಧಾರವಾಗಿಟ್ಟುಕೊಂಡು. ಇಡೀ ಜಿಲ್ಲೆಯಲ್ಲಿ ಎಷ್ಟು ಗ್ರಾಮಾಂತರ ಪ್ರದೇಶದ ಜನಸಂಖ್ಯೆ ಇದೆ, ಆ ಕ್ಷೇತ್ರದಿಂದ ಅಂದರೆ ಒಂದು ಕ್ಷೇತ್ರದಲ್ಲಿ ೪೦೦ ಜನಸಂಖ್ಯೆ ಒಂದು ಮಂಡಲದಂತೆ ಮಾಡಿದರೆ ಎಷ್ಟು ಮಂಡಲಗಳಾಗುತ್ತವೆ? ಎಷ್ಟು ಮಂಡಲಗಳ ಪ್ರತಿನಿಧಿಗಳು ನಿರ್ಮಾಣವಾಗುತ್ತಾರೆ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ೫ ಪರ್ಸೆಂಟ್ ಹೆಚ್ಚು ಕಡಿಮೆ ಮಾಡಿ ಮಂಡಲಗಳನ್ನು ನಿರ್ಮಾಣ ಮಾಡಬೇಕೆಂಬ ವಿಶಾಲವಾದ ತಾತ್ವಿಕವಾದ ನಿಯಮಗಳನ್ನು ಆಧಾರವಾಗಿಟ್ಟುಕೊಂಡು ಮಂಡಲಗಳನ್ನು ನಿರ್ಮಾಣ ಮಾಡಬೇಕೆಂಬ ಆದೇಶವನ್ನು ನೀಡಿದ್ದೇವೆ. ಜಿಲ್ಲಾ ಪರಿಷತ್ತನ್ನು ವಿಂಗಡಣೆ ಮಾಡಬೇಕಾದರೆ ಅದೇ ಸೂತ್ರವನ್ನು ಹಾಕಿಕೊಂಡಿವು. ಜಿಲ್ಲೆಯನ್ನು ಒಂದು ಘಟಕವಾಗಿ ಮೊದಲು ತೆಗೆದುಕೊಂಡು ಜನಸಂಖ್ಯೆಯಿಂದ ಭಾಗ ಮಾಡಿ ಎಷ್ಟು ಕ್ಷೇತ್ರಗಳು ನಿರ್ಮಾಣವಾಗುತ್ತವೆಂದು ನಿರ್ಧಾರ ಮಾಡಬೇಕು. ಹಾಗೆಯೇ ತಾಲ್ಲೂಕನ್ನು ಘಟಕವಾಗಿ ಇಟ್ಟುಕೊಂಡು ವಿಂಗಡಣೆ ಮಾಡಬೇಕು. ಎಲ್ಲಿ ಹೆಣ್ಣು ಮಕ್ಕಳ ಸರಾಸರಿ ಸಂಖ್ಯೆ ಜನಸಂಖ್ಯೆಗಿಂತ ಹೆಚ್ಚಾಗಿರುತ್ತದೋ ಅಲ್ಲಿ ಹೆಣ್ಣು ಮಕ್ಕಳಿಗೆ ರಿಸರ್ವೇಷನ್ ಕೊಡಬೇಕು, ಎಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸಂಖ್ಯೆ ಹೆಚ್ಚು ಇರುತ್ತದೋ ಅಲ್ಲಿ ಅವರಿಗೆ ರಿಸರ್ವೇಷನ್ ಮಾಡಬೇಕು ಎಂದು ಹೇಳಿದೆವು. ಒಂದು ತಾಲ್ಲೂಕಿನಲ್ಲಿ ೪ ಕ್ಷೇತ್ರಗಳು ಬಂದರೆ ಮೊದಲನೆಯ ಕ್ಷೇತ್ರ ಜನರಲ್, ಎರಡನೆಯದು ಹೆಣ್ಣುಮಕ್ಕಳಿಗೆ ರಿಸರ್ವೇಷನ್ ಮೂರನೆಯದು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ. ಹೀಗೆ ಸೂತ್ರಗಳನ್ನಿಟ್ಟುಕೊಂಡು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಈ ಸೂತ್ರಗಳು ಎಲ್ಲಿಯೂ ಉಲ್ಲಂಘನೆ ಆಗಿಲ್ಲ ಆ ಸದನದಲ್ಲಿ ಕೂಡ ಉಲ್ಲಂಘನೆಯಾಗಿದೆ ಎಂದು ಯಾರೂ ಹೇಳಿಲ್ಲ. ಎಲ್ಲಿ ಒಂದು ತಪ್ಪಾಗಿದೆ ಎಂದರೆ ಸದನದ ಸದಸ್ಯರು ಸಲಹೆಗಳನ್ನು ಕಳುಹಿಸುವಾಗ ಕೆಲವು ಸಮಯದಲ್ಲಿ ೮ ಸಾವಿರಕ್ಕೆ ಒಂದು, ೧೨ ಸಾವಿರಕ್ಕೆ ಒಂದು, ೯ ಸಾವಿರಕ್ಕೆ ಒಂದು ಎಂದು ಕಳುಹಿಸಿದ್ದಾರೆ. ಒಂದು ಜಿಲ್ಲೆಯಲ್ಲಿ ತಾಲ್ಲೂಕಿನಲ್ಲಿ ೮ ಸಾವಿರಕ್ಕೆ ೧೨ ಸಾವಿರಕ್ಕೆ ಒಂದು ಮಾಡೋಣವೆಂದರೆ ಸರ್ಕಾರಿ ಮಟ್ಟದಲ್ಲಿ ಯೂನಿ ಫಾರ್ಮಿಟಿ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ೧೦ ಸಾವಿರಕ್ಕೆ ಒಂದು ಡಿವಿಜನ್ ಮಾಡಿ ಮಂಡಲ್ ಮಾಡುವಾಗ ಕೆಲವರಿಗೆ ನೋವಾಗಿದೆ. ನಿನ್ನೆ ಪ್ರತಿ ಪಕ್ಷದ ನಾಯಕರು ಕೂಡ ತಾವು ಹೇಳಿದ ಹಾಗೆ ಹೇಳಿದರು. ಯಾರನ್ನೂ ಕೇಳಲಿಲ್ಲ ಎಂಬುದನ್ನು ಒಪ್ಪುವುದಿಲ್ಲ. ಗುಲ್ಬರ್ಗ ಮತ್ತು

ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಒಂದು ಸಾರಿ ಮೀಟಿಂಗ್ ಮಾಡಿದ್ದೇವೆ. ೨ನೇ ಸಾರಿ ಮಾಡಿಲ್ಲ. ಆದರೆ ಬಹುತೇಕ ಜಿಲ್ಲೆಗಳಲ್ಲಿ ೨ ಸಾರಿ ಆಗಿದೆ. ಎಲ್ಲರನ್ನು ಕರೆದಿದ್ದೇವೆ. ಕೇಳಿದ್ದೇವೆ. ಒಬ್ಬ ಮಾನ್ಯ ಸದಸ್ಯರು- ನಮ್ಮ ಜಿಲ್ಲೆಯಲ್ಲಿ ಒಂದಕ್ಕಿಂತ ಜಾಸ್ತಿ ಆಗಿಲ್ಲ. ನಮ್ಮನ್ನು ಕರೆದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.— ನನ್ನಲ್ಲಿ ಇರತಕ್ಕ ಮಾಹಿತಿ ಪ್ರಕಾರ ಕರೆದಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಒಂದು ಸಾರಿಯೂ ನಮ್ಮನ್ನು ಕರೆದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.— ಬೆಂಗಳೂರು ಡಿವಿಜನ್‌ನಲ್ಲಿ ೧೯-೧೦-೮೯ರಲ್ಲಿ ಎಂ ಪಿ ಗಳ ಮತ್ತು ಎಲ್.ಎ.ಗಳ ಮೀಟಿಂಗ್ ಆಗಿದೆ. ಇದರ ನಂತರ ಸದನಕ್ಕೆ ಮಾತ್ರ ಕೊಟ್ಟು ಹಾಗೆ ಎಲ್ಲಾ ಪಕ್ಷದ ಅಧ್ಯಕ್ಷರಿಗೂ ಪತ್ರ ಬರೆದಿದ್ದೇವೆ. ಕಮ್ಯುನಿಸ್ಟ್ ಪಕ್ಷದವರಿಗೂ ಪತ್ರ ಬರೆದಿದ್ದೇವೆ. ಪಾರ್ಲಿಮೆಂಟ್ ಸದಸ್ಯರಿಗೂ ಬರೆದಿದ್ದೇವೆ. ಶಾಸಕರನ್ನು ಕನ್‌ಸಲ್ಟ್ ಮಾಡತಕ್ಕದ್ದೇದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಯಾವುದೇ ಸಭೆ ನಡೆಯುವಾಗ ಅವರೊಡನೆ ಮಾತನಾಡಬೇಕೆಂದು ಹೇಳಿದ್ದೇವೆ ಇದನ್ನು ನಾನಂ ಪತಕ್ಕೆ ಹೇಳುತ್ತಿದ್ದೇನೆಂದರೆ ಸದನದಲ್ಲಿ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,— ನಮ್ಮಲ್ಲಿ ಮೀಟಿಂಗ್ ಆಗಿಲ್ಲವೆಂದು ಗೊತ್ತಿದೆ. ಮಂಡ್ಯದಲ್ಲಿ ಬೆಳಗಾರ್ಗದಲ್ಲಿ ಆಗಿಲ್ಲವೆಂದು ಹೇಳಿದಿರಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಒಂದು ಸಾರಿ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದು ಸಾರಿಯೂ ಕರೆದಿಲ್ಲ. ಪ್ರೈಜರ್‌ನಲ್ಲಿ ಮೀಟ್ ಮಾಡಕ್ಕೆ ಆಗಲಿಲ್ಲವೆಂದು ಹೇಳಿದರು. ಬೇಕಾದರೆ ಕರೆಸಿ ಹೇಳುತ್ತೇನೆ.

ಶ್ರೀ ಧರ್ಮಸಿಂಗ್.— ಡಿಡಿಸಿ ಮೀಟಿಂಗ್‌ನಲ್ಲಿ ನಾವು ಎಲ್ಲ ಪ್ರೊಪೋಸಲ್ ನೋಡುತ್ತಿದ್ದೇವೆ. ಯಾವುದೇ ರೀತಿಯಲ್ಲಿ ತಹಶೀಲ್ದಾರ್ ಅಥವಾ ಡಿ.ಸಿ. ಯವರ ಕಡೆ ಬಂದಿದ್ದರೂ ಅವನ್ನು ನಮ್ಮ ಕಡೆ ಕೊಡಿ ನಮ್ಮನ್ನು ಮೀಟಿಂಗಿಗೆ ಕರೆಸಿ ಬರುತ್ತೇವೆಂದು ನಾವೆಲ್ಲ ಶಾಸಕರು ಹೇಳಿದೆವು. ಆದಾದ ಮೇಲೆ ಜಿಲ್ಲಾಧಿಕಾರಿಗಳು ಮೀಟಿಂಗ್ ಕರೆಸಲಿಲ್ಲ. ೧೯೮೯ರಲ್ಲಿ ಸೆನ್ಸಸ್ ಬಂತಲ್ಲ ಆಗ ಎಲ್ಲಾ ತಹಶೀಲ್ದಾರರಿಗೆ ಆದೇಶ ಕೊಟ್ಟು ೮ ದಿನದೊಳಗೆ ಮಂಡಲ್ ಪಂಚಾಯಿತಿಯ ಡೀಲಿಮಿಟೇಷನ್ ಕಾನ್‌ಸ್ಟಿಟ್ಯುಯನ್ಸಿಯ ವರದಿ ಬರಬೇಕೆಂದು ಹೇಳಿದಾಗಲೂ ತಹಶೀಲ್ದಾರರು ಯಾರನ್ನೂ ಕನ್‌ಸಲ್ಟೇಷನ್ ಮಾಡಿಲ್ಲಿಲ್ಲ. ಚುನಾವಣೆ ಮಾಡಲಿಕ್ಕೆ ಹೊರಟಾಗ ಎಷ್ಟು ತಪ್ಪುಗಳನ್ನು ಮಾಡಿದ್ದೀರಿ ಎಂಬುದನ್ನು ನಾನು ನೇರವಾಗಿ ಹೇಳಿದ್ದೇನೆ. ದಿಸ್ಟ್ರಿಕ್ಟ್ ಜನತಾ ಪಾರ್ಟಿ ಪ್ರೆಸಿಡೆಂಟ್ ತಹಶೀಲ್ದಾರರ ಜೊತೆ ಕುಳಿತು ಸಮಾಲೋಚನೆ ಮಾಡಿ ಅವರ ಸಲಹೆಯನ್ನು ಕೇಳಿದ್ದಾರೆ. ನಮ್ಮನ್ನು ಕೇಳಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.— ನನ್ನಲ್ಲಿರತಕ್ಕ ದಾಖಲೆ ಪ್ರಕಾರ ಆದೇಶ ಕೊಟ್ಟಿರುವುದು ಟೆಲಿಗ್ರಾಂ ಕೊಟ್ಟಿರುವುದು ಎಲ್ಲ ಇದೆ. ಅದನ್ನು ಬೇಕಾದರೆ ಸದನದ ಮುಂದಿಡುತ್ತೇನೆ.

ಶ್ರೀ ಧರ್ಮಸಿಂಗ್.— ಎಲ್ಲ ಶಾಸಕರು ಹೇಳುತ್ತಿದ್ದಾರೆ. ನಾನು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾವು ಮಂತ್ರಿಗಳಾಗಿ ಈ ತರಹ ಹೇಳಿಬಾರದಾಗಿತ್ತು. ಜಿಲ್ಲಾಧಿಕಾರಿಗಳು ಸಮಾಲೋಚನೆ ಮಾಡಿಲ್ಲವೆಂದು ಹೇಳುತ್ತಿದ್ದೇವೆ. ನಿಮ್ಮ ಹತ್ತಿರ ಯಾವ ವರದಿ ಇದೆ ಅದನ್ನು ಹರಿದು ಹಾಕಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ೨ನೇ ಸಾರಿ ಕರೆಯಲಿಲ್ಲವೆಂದು ನಿನ್ನೆ ಹೇಳಿದಿರಿ. ಅದು ರಾತ್ರಿಯೆಲ್ಲಿದೆ. ಇನ್ನು ಎಷ್ಟು ಸಾರಿ ಕರೆಯಬೇಕು? ೫೦ ಸಾರಿ ಕರೆಯುತ್ತೇವೆಂದು ಹೇಳಿಲ್ಲ. ಒಂದು ಸಾರಿ ಕರೆಯುತ್ತೇವೆಂದು ಹೇಳಿ ಕರೆದಿದ್ದೇವೆ.

ಶ್ರೀ ಧರ್ಮಸಿಂಗ್.— ಇಲ್ಲ, ಕರೆದಿಲ್ಲ. ಎಲ್ಲಾ ಶಾಸಕರು ಹೇಳುತ್ತಿದ್ದಾರೆ.

(ಗೊಂದಲ)

SRI DHARAMSINGH.—I am the last person, to tell you all these things.

SRI ABDUL NAZIR SAB.—It is on record.

SRI K.B. SHANAPPA.—We raised ourselves please consult us, this is what we said.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಇಲ್ಲವೆ ? ತಾವು ಯಾವುದಾದರೂ ಒಂದು ತೀರ್ಮಾನ ಕೊಡಿ. ಉತ್ತರ ಹೇಳಿದ ಮೇಲೆ ಅವರು ಕೇಳಲಿ? ಹೇಳುತ್ತೇನೆ.

ಉಪಾಧ್ಯಕ್ಷರು.—ಅವರಿಗೆ ನೀವು ಆನ್ಸರ್ ಮಾಡಬೇಡಿ. ನೇರವಾಗಿ ಉತ್ತರ ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅವರು ಮಾತನಾಡುತ್ತಲೇ ಇದ್ದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧಿಕಾರಿಗಳು ಬರೆದು ಕೊಟ್ಟದ್ದನ್ನು ಓದುತ್ತಾರೆ, ನಾವು ಹೇಳುವುದನ್ನು ನಂಬಿ ನಾವು ಡಿಡಿಸಿ, ಮೀಟಿಂಗ್‌ನಲ್ಲಿ ರೈಸ್ ಮಾಡಿದ್ದೇವೆಂದು ಹೇಳಿದೆವು. ಅದನ್ನು ಏತಕ್ಕೆ ನಂಬಬಾರದು ?

(ಗೊಂದಲ)

ಉಪಾಧ್ಯಕ್ಷರು.—ಅವರು ಉತ್ತರ ಹೇಳಲಿ. ಧರ್ಮಸಿಂಗರಿಗೆ ಉತ್ತರ ಬೇಕಿಲ್ಲದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಉತ್ತರ ಹೇಳಿದ ಮೇಲೆ ಕೇಳಿ. ತಾವು ಹೇಳಿದ್ದು ಸತ್ಯವೋ, ಅಸತ್ಯವೋ, ನಾನು ಕೇಳಿದ್ದೇನೆ. ನಂತರ ಕೇಳಿ, ಉತ್ತರಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಮಂತಕ್ಷೇತ್ರದ ಕಡೆ ಏನಾಗಿದೆ ಎಂದು ಹೇಳಿದ್ದೇನೆ. ಏನು ಹೇಳುತ್ತೀರಾ ಹೇಳಿ ಎಂದರೆ ಡಿ.ಸಿ. ಯವರಿಗೆ ಏನು ಹೇಳೋಣ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಾವು ಇರಲಿಲ್ಲ. ಮೀಟಿಂಗ್ ಕರೆದದ್ದನ್ನು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್.—ನಾವು ಈಗಾಗಲೇ ಗುಲ್ಬರ್ಗದ ಬಗ್ಗೆ ಹೇಳಿದ್ದೇವೆ. ಅಲ್ಲಿ ಇದರ ಬಗ್ಗೆ ಮೀಟಿಂಗ್ ಕರೆದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೇಳುವವರೆಗೆ ತಾಳ್ಮೆಯಿಂದ ಕುಳಿತರೆ ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ವಿಧಾನ ಸೌಧದಲ್ಲಿ ಕುಳಿತು ಚೇಂಜ್ ಮಾಡುವುದಕ್ಕೆ ಬರುತ್ತದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಕಾನೂನು ಪ್ರಕಾರ ಇದ್ದರೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ಆಧಾರದ ಮೇಲೆ ಮಾಡಿದ್ದೀರಿ ಹೇಳಿ. ಯಾವುದು ಅಡ್ಮಿನಿಸ್ಟ್ರೇಟೀವ್ ಕನ್‌ವೀನಿಯನ್ಸ್ ಇದೆ ಅದನ್ನು ನೋಡಿಲ್ಲ. ನಮ್ಮ ಮಾತು ಕೇಳಿ ಮಾಡಿಲ್ಲ. You may be a good man but under pressure, you are acting. You are not capable to take a decision.

ಶ್ರೀ ಅಬ್ದುಲ್ ನಜೀರ್ ಸಾಬ್.—ಧರ್ಮಸಿಂಗ್‌ರವರಿಗೂ ಖರ್ಗೆಯವರಿಗೂ ಪೂರ್ಣ ತೃಪ್ತಿಯಂತೂ ಆಗಿಲ್ಲ. ಅವರಿಗೆ ತೃಪ್ತಿ ಆಗತಕ್ಕಂಥ ಶಾಸನವನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರನ್ನು ತೃಪ್ತಿ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ನೀವು ಉತ್ತರ ಹೇಳಿ. ಲಕ್ಕಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಒಬ್ಬೊಬ್ಬರೂ ಹೊಸದಾಗಿ ಹೇಳಬೇಡಿ.

ಶ್ರೀ ಧರ್ಮಸಿಂಗ್,—ನಮಗೆ ತೃಪ್ತಿ ಮಾಡುವುದು ಏನೂ ಬೇಡ.

(ಗೊಂದಲ)

ಶ್ರೀ ಯು. ಭೂಪತಿ.—ಜಿಲ್ಲಾಮಟ್ಟದಲ್ಲಿ ಮಾಡಿದ್ದಾರೆ. ನೀವು ಉತ್ತರ ಹೇಳಬೇಕು ಎಂದು ತಾವು ಹಠ ಮಾಡಿದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಅವರು ಹೇಳಿದ ಮೇಲೆ ನಿಮಗೆ ಏನಾದರೂ ಅದರಲ್ಲಿ ಸರಿಯಾಗಿಲ್ಲದಿದ್ದರೆ ಕೇಳಿ ಅದನ್ನು ಬಿಟ್ಟು ಮಂಧ್ಯೆ ಮಂಧ್ಯೆ ಈ ರೀತಿ ಏಳುವುದು ಸರಿಯಲ್ಲ.

ಒಬ್ಬ ಮಾನ್ಯ ಸದಸ್ಯರು.—ಅವರಿಗೆ ಎಲೆಕ್ಷನ್ ಅಂದರೆ ಗಾಬರಿ.

ಶ್ರೀ ಯು. ಭೂಪತಿ.—ಅವರ ಬಗ್ಗೆ ನನಗೆ ಗೌರವ ಇದೆ: ಜಿಲ್ಲಾ ಮಟ್ಟದಲ್ಲಿ ಬದಲಾವಣೆ ಆಗಿದ್ದರೆ ಏತಕ್ಕೆ ಬದಲಾವಣೆ ಮಾಡಬೇಕು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಪುನರ್‌ವಿಮರ್ಶೆ ಮಾಡಿಲ್ಲ ಎಂದು ತಾವು ಹೇಳಿದಿರಿ. ಎರಡು ಡಿಸ್ಟ್ರಿಕ್ಟ್‌ನಲ್ಲಿ ಪುನಃ ಕೇಳಿ ಅಧಿಕಾರಿಗಳಿಗೆ ಸೂಚನೆ ಕೊಡಿ. ಅದನ್ನು ಕೇಳಿ ವಿಂಗಡಣೆ ಮಾಡಿ ಎಂದು ಹೇಳಿ.

(ಗೊಂದಲ)

ಉಪಾಧ್ಯಕ್ಷರು.—ಬಸವಲಿಂಗಪ್ಪನವರೇ, ಅವರು ಪೂರಾ ಹೇಳಿದ ಮೇಲೆ ಅದರಲ್ಲಿ ಏನಾದರೂ ಇದ್ದರೆ ನೀವು ಕೇಳಬಹುದು,

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಹೇಳಿದ ಮೇಲೆ ತಾವು ಕೇಳಿ. ಅದನ್ನು ಬಿಟ್ಟು ಗುಲ್ಬರ್ಗ ಎಂದರೆ ಏನು ? ಅದು ಸಮುದ್ರದ ದಡದಲ್ಲಿದೆಯೇ ? ವಾಕ್ಯ ಪೂರ್ಣ ಮಾಡುವ ಮುಂಚೆಯೇ ಎದ್ದು ನಿಂತರೆ.....

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಗುಲ್ಬರ್ಗ ಎಂಬ ಪದ ಎತ್ತಿದ ಕೂಡಲೇ.....

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ.....

(ಗೊಂದಲ)

ಉಪಸಭಾಧ್ಯಕ್ಷರು.—ಬಸವಲಿಂಗಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ರಾಜ್ಯದಲ್ಲಿ.....

ಉಪಾಧ್ಯಕ್ಷರು.—ನೀವೇನು ಏನು ಹೇಳುತ್ತಾರೋ ಕೇಳಿ.

(ಗೊಂದಲ)

MR. DEPUTY SPEAKER.—This is not the method.

ಶ್ರೀ ಬಿ. ಬಸವಲಿಂಗಪ್ಪ:—ಕರ್ನಾಟಕ ರಾಜ್ಯದಲ್ಲಿ ವಿಂಗಡಣೆ ಮಾಡುವಾಗ ಒಂದು ಡಿಸ್ಟ್ರಿಕ್ಟ್ ಅಥವಾ ಎರಡು ಡಿಸ್ಟ್ರಿಕ್ಟ್‌ನಲ್ಲಿ ಮಾಡಿಲ್ಲ ಎಂದು ಹೇಳಿದರೆ ಕರ್ನಾಟಕ ರಾಜ್ಯದಲ್ಲಿಯೇ ಸರಿಯಾಗಿ ಮಾಡಿಲ್ಲ ಎಂದು ಅರ್ಥವಾಗುತ್ತದೆ. ಆದು.....

ಉಪಾಧ್ಯಕ್ಷರು.—ಸರಿಯಾಗಿ ಮಾಡಿಲ್ಲ ಎಂದು ಅವರೂ ಏನೂ ಹೇಳಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸರಿಯಾಗಿ ಮಾಡಿ ಮುಂದೆ ಹೆಜ್ಜೆ ಇಡಿ ಎಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ.....

ಉಪಾಧ್ಯಕ್ಷರು.—ಅವರು ಉತ್ತರ ಹೇಳಬೇಕೋ ಬೇಡವೋ ಹೇಳಿ.

ಶ್ರೀ ಧರ್ಮಸಿಂಗ್.—ಹೋದ ಸಲ delimitation of Constituencies ಆಗತಕ್ಕಂಥ ಡ್ಡರಲ್ಲಿ ಎಲ್ಲಾ ಶಾಸಕರುಗಳಿಗೂ ಕೂಡಾ ಸಮಾಲೋಚನೆ ಮಾಡಬೇಕು ಎಂದು ಕೇಳಿದ್ದೆವು. ಅದರಂತೆ ಮುಖ್ಯಮಂತ್ರಿಗಳು ಮಂತ್ರಿ ಇವರು ಆಶ್ವಾಸನೆ ಕೊಟ್ಟು ಮಾಡುತ್ತೇವೆ ಎಂದು ಹೇಳಿದರು. ಜನ ಸಂಖ್ಯೆ ಆಧಾರದ ಮೇಲೆ ಅದು ಜಿಲ್ಲಾಪರಿಷತ್ತು, ಮಂಡಲ್ ಪಂಚಾಯತ್ ಮಾಡುತ್ತೀರೋ ಅದರ ವಿವರಣೆ ಬೇಡ. ಆಶ್ವಾಸನೆಯನ್ನು ಕೊಟ್ಟಿದ್ದ ಮೇರೆಗೆ ತಾವು ಕನ್‌ಸಲ್ಟ್ ಮಾಡಿಲ್ಲ. ಅದಕ್ಕೆ ಏನು ಉತ್ತರ ಹೇಳಿ. ಇಂತಹ ಮಂಡಲ್ ಪಂಚಾಯಿತಿಯಲ್ಲಿ ಎಲ್ಲೆಲ್ಲಿ ತಪ್ಪಾಗಿದೆ ನಿರ್ದಿಷ್ಟವಾಗಿ ನಮಗೆ ಹೇಳಿದ್ದಾರೆ. ಅದರ ಬಗ್ಗೆ ನಮಗೆ ಉತ್ತರ ಬೇಕು. ಸಂಖ್ಯೆ ಹೇಳಬಾರದು. ಅಧಿಕಾರಿಗಳು.....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ತಾವು ವಕೀಲರು ಇದ್ದೀರಿ.

ಶ್ರೀ ಧರ್ಮಸಿಂಗ್.—ರಾಜಕೀಯವಾಗಿ ಮಾಡುತ್ತೀರಿ ಎಂದು ಆಪಾದನೆ ಕೂಡಾ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ನಜೀರ್‌ಸಾಬ್‌ರವರಿಗೆ ಹೇಳಿದ್ದೆನೆ. ರಾಜಕೀಯವಾಗಿ ಮಾಡಿದ್ದಾರೆ. ಬಹಳ ದಿವಸ ವಿಸ್‌ಗೈಡ್ ಮಾಡಿದ್ದಾರೆ. ಅದನ್ನು ಸರಿಪಡಿಸಿ ಎಂದು ಹೇಳುತ್ತಿರುವುದು.

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಹೇಳುವುದನ್ನು ಕೇಳುವ ತಾಳ್ಮೆ ಸೌಜನ್ಯ ಇಲ್ಲದಿದ್ದರೆ ವಾದ ಏಕೆ ? ಜನ ತಂತ್ರದ ಬಗ್ಗೆ ಸದನದಲ್ಲಿ ವಾದವಿವಾದಗಳು ಏತಕ್ಕೆ ಆಗಬೇಕು ? ಅವರು ಹೇಳುವುದನ್ನೇ ಕೇಳಿಕೊಂಡು ಹೋಗುವ ಹಾಗಿದ್ದರೆ ಅದೇ ಆಗಲಿ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಕೊಟ್ಟಿಂಥ ಗೈಡ್‌ಲೈನ್ಸ್ ನಾರ್ಮ್ಸ ಪ್ರಕಾರ.....

ಉಪಸಭಾಧ್ಯಕ್ಷರು.—ಅವರು ಉತ್ತರ ಹೇಳಿದ ಮೇಲೆ ತಾನೆ ಗೊತ್ತಾಗುವುದು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾರ್ಮ್ಸ ಕೂಡಾ ಫಾಲೊ ಮಾಡಿಲ್ಲ.

ಉಪಾಧ್ಯಕ್ಷರು.—ಕುಳಿತುಕೊಳ್ಳಿ. ಅವರು ಹೇಳುತ್ತಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೇ, ನಿನ್ನೆಯಿಂದ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡುವಾಗ ಇಂಥ ಕಡೆ ಕಾನೂನು ಭಂಗ ಮಾಡಿದ್ದೀರಿ, ಕಾನೂನು ಉಲ್ಲಂಘನೆ ನಿಮ್ಮ ಅಧಿಕಾರಿಗಳು ಮಾಡಿದ್ದಾರೆ ಅಥವಾ ರಾಜಕೀಯ ಹಸ್ತಕ್ಷೇಪ ಮಾಡಿ ಕಾನೂನು ಭಂಗ ಮಾಡಿದ್ದೀರಿ ಎಂದು ಹೇಳಲಿಲ್ಲ. ಕಾನೂನಿನ ವಿರುದ್ಧವಾಗಿ ಮಾಡಿದ್ದೀರಿ ಕೊಟ್ಟಿರಥಕ್ಕಂಥ ನಿರ್ದೇಶಗಳಿಗನುಗುಣವಾಗಿ ಮಾಡಿರದಿದ್ದರೆ ಹೇಳಲಿ. ಮಾನ್ಯ ಶ್ರೀನಿವಾಸ್‌ರವರು ನೇರವಾಗಿ ಉತ್ತರ ಹೇಳಿ ಎಂದು ಹೇಳಿದರು. ನಾನು ನೇರವಾಗಿಯೇ ಹೇಳುತ್ತೇನೆ. ೫ ಗಂಟೆಗೊಂದು ನಿರ್ದೇಶಗಳನ್ನು ಬದಲಾಯಿಸಿ ಬದಲಾಯಿಸಿ ಕೊಟ್ಟಿರಿ ಎಂದು ಹೇಳಿದರು. ನನ್ನ ಹತ್ತಿರ ನಿರ್ದೇಶನಗಳ ಸುತ್ತೋಲೆಗಳ ಕಾಪಿ ಇದೆ, ಅವರಿಗೆ ಅದನ್ನು ಕಳುಹಿಸಿಕೊಡುತ್ತೇನೆ. ಐದು ನಿರ್ದೇಶನಗಳನ್ನು ಮಾತ್ರ ಇದರಲ್ಲಿ ಕೊಡಲಾಗಿದೆ. ಬದಲಾವಣೆ ಏನೂ ಮಾಡಿಲ್ಲ. ಯಾವಾಗಲೂ ಬದಲಾವಣೆ ಮಾಡಿಲ್ಲ. ಜಿಲ್ಲಾಧಿಕಾರಿಗಳು ಹೊಸ ಶಾಸನಗಳ ಬಗ್ಗೆ ಅವರೇನಾದರೂ ವಿವರಣೆಯನ್ನು ಕೇಳಿದ್ದರೆ ವಿವರಣೆಯನ್ನು ಕಳುಹಿಸಿದ್ದೇವೆ. ಮೂಲಭೂತವಾಗಿ ಶಾಸನಕ್ಕನುಗುಣವಾಗಿ ನಿರ್ದೇಶನವನ್ನು ಕೊಟ್ಟಿದ್ದೇವೆಯೇ ಹೊರತು ಅಲ್ಲಿ ತಿರುಚಿ ಮಂಗರುಚಿ ಆಗಲೀ ಆದೇಶವನ್ನು ಕೊಟ್ಟಿಲ್ಲ. ಅದನ್ನು ಕಳುಹಿಸಿಕೊಡುತ್ತೇನೆ, ನೋಡಿ. ಐದು ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದೇವೆ. ವಿವರಣೆಯನ್ನು ಕೊಟ್ಟಿದ್ದೇವೆ. ಯಾವುದೇ ಬದಲಾವಣೆ ಮಾಡಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ವಿವರಣೆ ಎಂದು ಕೊಟ್ಟಿರಬಹುದು. ಆದರೆ ಡೆಪ್ಯುಟಿ ಕಮಿಷನರ್ ಪ್ರತಿಯೊಂದು ವಿವರಣೆಯನ್ನು ಬೇರೆ ಸರ್ಕ್ಯುಲರ್ ಎಂದು ಹಿಡಿದು ಕೊಂಡಿದ್ದಾರೆ. ನೀವು ವಿವರಣೆ ಎಂದು ಹೇಳುತ್ತೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ಆಗಿಲ್ಲ ಸ್ವಾಮಿ. ನನ್ನ ಹತ್ತಿರ ಇರತಕ್ಕಂಥ ದಾಖಲೆಯನ್ನೇ ಮುಂದೆ ಇಡುತ್ತೇನೆ, ತಾವು ಮಂತ್ರಿಯಾಗಿ ಕೆಲಸ ಮಾಡಿದವರು.

(ಗೊಂದಲ)

SRI DHARMASINGH.—It was not meeting.

ಶ್ರೀ ರಮೇಶ್ ಕುಮಾರ್.—ಇದು ಬಹಳ ಚಾಸ್ತಿಯಾಯಿತು. ಮಾತನಾಡುವುದಕ್ಕೂ ಬಿಡುವುದಿಲ್ಲ. ದಯವಿಟ್ಟು ಕೇಳಿ. ತಾವು ಹೇಳುವುದನ್ನು ಹೇಳಿದ್ದೀರಿ, ಅವರು ಹೇಳುವುದರಿಂದ ನಿಮಗೆ ತೃಪ್ತಿಯಾಗದಿದ್ದರೆ ಮತ್ತೊಮ್ಮೆ ಕೇಳಿ ಈ ರೀತಿ ಗಲಾಟೆ ಆಗುತ್ತಿದ್ದರೆ ಏನೂ ನಡೆಯುತ್ತಿದೆ ಎನ್ನುವುದೇ ಗೊತ್ತಾಗುವುದಿಲ್ಲ. ಇಲ್ಲವಾದರೆ ನಮ್ಮನ್ನು ಹೊರಗಡೆ ಕಳುಹಿಸಿ ನೀವೇ ನಡೆಸಿಕೊಂಡು ಹೋಗಿ.

(ಗೊಂದಲ)

ಶ್ರೀ ಧರ್ಮಸಿಂಗ್.—ಧೈರ್ಯವಾಗಿ ಹೇಳುತ್ತೇನೆ.

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಅವರು ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಾಗುತ್ತದೆ. ಮಧ್ಯೆ ಮಧ್ಯೆ ಈ ತರಹ ವಿತಕ್ಕೆ ಏಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪದನಕ್ಕೆ ನಾನು ಮಾತು ಕೊಟ್ಟಂತೆ ಎಲ್ಲಾ ರಾಜಕೀಯ ಪಕ್ಷದ ಪ್ರಮುಖರುಗಳಿಗೆ ಪತ್ರ ಬರೆದಿದ್ದೇನೆ. ಜೊತೆಗೆ ಎಲ್ಲಾ ಲೋಕಸಭಾ ಸದಸ್ಯರಿಗೂ ರಾಜ್ಯ ಸಭಾ ಸದಸ್ಯರಿಗೂ ಪತ್ರ ಬರೆದಿದ್ದೇನೆ. ಪದನಂತರ ಈ ಪಾರ್ಟಿಯ, ಆ ಪಾರ್ಟಿಯ ಶಾಸಕರುಗಳನ್ನು ಕರೆದು ಸಮಾಲೋಚನೆ ನೀಪು ನಡೆಸಬೇಕು ಎಂದು ಹೇಳಿ ಆದೇಶವನ್ನು ಕೊಟ್ಟಿದ್ದೇನೆ. ಆದೇಶದ ಪ್ರಕಾರ ಸಭೆಗಳು ನಡೆದಿವೆ. ನನ್ನ ಮುಂದೆ ಇರತಕ್ಕಂಥ ವರ್ತಮಾನವನ್ನು ಹೇಳಿದ್ದೇನೆ. ಅಲ್ಲಿ ಕರೆದಿಲ್ಲ, ಮಾಡಿಲ್ಲ ಎಂದು ಹೇಳಿದರೆ, ಸರ್ಕಾರಕ್ಕೆ ಬಂದಿರತಕ್ಕಂಥ ದಾಖಲೆಯಲ್ಲಿ ಇರುವುದನ್ನು ಹೇಳುತ್ತೇನೆ. ನಾವು ಕೊಟ್ಟ ಆದೇಶವನ್ನು ನೋಡಿ. ಶಾಸನಬದ್ಧವಾಗಿ ಜಿಲ್ಲಾಧಿಕಾರಿಗೆ ವಿಂಗಡಣೆ ಮಾಡತಕ್ಕಂಥ ಅಧಿಕಾರ.....

ಶ್ರೀ ಧರ್ಮಸಿಂಗ್.—ಗುಲ್ಬರ್ಗ ಜನರ.....

(ಗೊಂದಲ)

ಉಪಸಭಾಧ್ಯಕ್ಷರು.—ಮಧ್ಯೆ ಮಧ್ಯೆ ಈ ರೀತಿ ಮಾತನಾಡಿದರೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಧರ್ಮಸಿಂಗ್‌ರವರು ಆತುರ ಮಾಡಿದರೆ ಹೇಗೆ ? ದಿನಾಂಕ ೧೬-೧೨-೮೫ ರಲ್ಲಿ ಮೊದಲ ಬಾರಿಗೆ ನೋಟಿಫಿಕೇಷನ್ ಆಗಿದೆ. ಫೈನಲ್ ನೋಟಿಫಿಕೇಷನ್ ೧೬-೧-೮೬ಕ್ಕೆ ಆಗಬೇಕು ಎಂದು ಆದೇಶವನ್ನು ಕೊಟ್ಟು ನೋಟಿಫಿಕೇಷನ್ ಆಗಿದೆ ಬೆಂಗಳೂರು ಡಿವಿಜನ್‌ನಲ್ಲಿ ಚಿತ್ರದುರ್ಗದಲ್ಲಿ, ಬೆಂಗಳೂರಿನಲ್ಲಿ ೧೯-೧೦-೮೫ ರಂದು ಸಭೆಗಳನ್ನು ಮಾಡಿದ್ದಾರೆ. ಕೋಲಾರದಲ್ಲಿ ೧೯-೧೧-೮೫ ರಂದು ಸಭೆಯನ್ನು ಮಾಡಿದ್ದಾರೆ, ಶಿವಮೊಗ್ಗದಲ್ಲಿ ೧೪-೭-೮೫ ರಂದು ಒಂದು ಸಭೆಯನ್ನು ಮಾಡಿದ್ದಾರೆ. ಮತ್ತು ೧೬-೯-೮೫ ರಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ತುಮಕೂರಿನಲ್ಲಿ ೧೫-೮-೮೫ ರಲ್ಲಿ ಸಭೆಯನ್ನು ಮಾಡಿದ್ದಾರೆ. ಮತ್ತು ೧೬-೮-೮೫ ರಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ.

೪-೦೦ ಪಿ.ಎಂ.

ಬೆಳಗಾಂ ವಿಭಾಗದಲ್ಲಿ ೧೪ನೇ ಆಗಸ್ಟ್ ೧೯೮೫ರಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ೧೬-೯-೧೯೮೫ರಲ್ಲಿ ಇನ್ನೊಂದು ಸಭೆಯನ್ನು ಮಾಡಿದ್ದಾರೆ. ಬಿಜಾಪುರದಲ್ಲಿ ೨೬-೮-೮೫ರಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ೨೦-೯-೮೫ರಲ್ಲಿ ಎರಡನೇ ಸಭೆಯನ್ನು ಮಾಡಿದ್ದಾರೆ. ಧಾರವಾಡದಲ್ಲಿ ೧೬-೯-೮೫ರಲ್ಲಿ ಸಭೆಯನ್ನು ಮಾಡಿದ್ದಾರೆ. ೨೮-೮-೮೫ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ, ೧೬-೯-೮೫ರಲ್ಲಿ ಇನ್ನೊಂದು ಸಭೆಯನ್ನು ಮಾಡಿದ್ದಾರೆ. ಗುಲ್ಬರ್ಗ ವಿಭಾಗದಲ್ಲಿ, ಬಳ್ಳಾರಿ

ಯಲ್ಲಿ ೧೮-೯-೮೫ರಲ್ಲಿ ಸಭೆಯನ್ನು ಮಾಡಿದ್ದಾರೆ, ಬೀದರ್‌ನಲ್ಲಿ ೧೨-೭-೮೫ರಲ್ಲಿ ಒಂದು ಸಭೆಯನ್ನು, ೧೫-೯-೮೫ರಲ್ಲಿ ಇನ್ನೊಂದು ಸಭೆಯನ್ನು ಮಾಡಿದ್ದಾರೆ. ಗುಲ್ಬರ್ಗದಲ್ಲಿ ೨೬-೮-೮೫ರಲ್ಲಿ ಮತ್ತು ೧೭-೯-೮೫ರಲ್ಲಿ ಸಭೆಗಳನ್ನು ಮಾಡಿದ್ದಾರೆ.

ಶ್ರೀ ಧರ್ಮಸಿಂಗ್.--ಎಲ್ಲಿ ಗುಲ್ಬರ್ಗದಲ್ಲಾ ? ನಮ್ಮನ್ನೆಲ್ಲಾ ಬಿಟ್ಟು ಜಿಲ್ಲಾಧಿಕಾರಿಗಳನ್ನೇ ಕೂರಿಸಿ.

ಶ್ರೀ ಅಬ್ದುಲ್ ನಜೀರ್‌ಸಾಬ್.--ಬರೆದುಕೊಳ್ಳಿ ಸ್ವಾಮಿ ತಾವು.

ಶ್ರೀ ಧರ್ಮಸಿಂಗ್.--ನಾವು ಬರೆದುಕೊಳ್ಳುವುದಕ್ಕೆ ತಯಾರಿಲ್ಲ. ಅಲ್ಲಿ ಸಭೆ ಕರೆದಿಲ್ಲ ಎಂದು ಹೇಳಂತ್ತಿದ್ದೇನೆ, ನನ್ನ ಮೇಲೆ ನಿಮಗೆ ವಿಶ್ವಾಸ ಇಲ್ಲ. ಜಿಲ್ಲಾಧಿಕಾರಿಗಳ ಮೇಲೆ ವಿಶ್ವಾಸ ಇದಯೇ?

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.--ತಾಳ್ಮೆಯಿಂದ ಕೇಳಿ. ೨೬-೮-೮೫ರಲ್ಲಿ ಒಂದು ಸಭೆಯನ್ನು ಮತ್ತು ೧೭-೯-೮೫ರಲ್ಲಿ ಮತ್ತೊಂದು ಸಭೆಯನ್ನು ಗುಲ್ಬರ್ಗದಲ್ಲಿ ಮಾಡಿದ್ದಾರೆ. ರಾಯಚೂರಿನಲ್ಲಿ ೧೯-೯-೧೯೮೫ರಲ್ಲಿ ಸಭೆಯನ್ನು ಮಾಡಿದ್ದಾರೆ. ಇದು ಗುಲ್ಬರ್ಗ ಡಿವಿಷನ್‌ನಲ್ಲಿ. ಮೈಸೂರಿನ ಡಿವಿಷನ್‌ನಲ್ಲಿ ಚಿಕ್ಕಮಗಳೂರಿನಲ್ಲಿ ೧೩-೧೦-೮೫ರಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯-೯-೮೫ರಲ್ಲಿ ಹಾಸನದಲ್ಲಿ ೧೫-೭-೮೫ ಮತ್ತು ೩೧-೭-೮೫ರಲ್ಲಿ ಸಭೆಯನ್ನು ಮಾಡಿದ್ದಾರೆ. ಕೊಡಗಿನಲ್ಲಿ ೨೫-೯-೮೫ರಲ್ಲಿ ಮಾಡಿದ್ದಾರೆ. ಮಂಡ್ಯದಲ್ಲಿ ೧೫-೯-೧೯೮೫ರಲ್ಲಿ ಮಾಡಿದ್ದಾರೆ. ಮೈಸೂರಿನಲ್ಲಿ ೩೧ ೮-೮೫ ಮತ್ತು ೧-೯-೮೫ರಲ್ಲಿ ಮಾಡಿದ್ದಾರೆ. ಹೀಗೆ ಎಲ್ಲ ಜಿಲ್ಲಾಧಿಕಾರಿಗಳಿಂದ ಸಭೆ ನಡೆದಿರುವ ಬಗ್ಗೆ ನನಗೆ ವರದಿ ಬಂದಿದೆ. ಆದರೆ ಏನಾಗಿದೆ, ನಮ್ಮ ಪಕ್ಷದ ಶಾಸಕರೂ ಕೂಡ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ೮ ಸಾವಿರಕ್ಕೆ ಒಂದು ಮಂಡಲ್, ೮½ ಸಾವಿರಕ್ಕೆ ಒಂದು, ೯ ಸಾವಿರಕ್ಕೆ ಒಂದು, ೧೦ ಸಾವಿರಕ್ಕೆ ಒಂದು ಮಾಡಪ್ಪ ಎಂದು ಅವರವರಿಗೆ ಅನುಕೂಲವಾಗುವಂತೆ ಕಳುಹಿಸುತ್ತಾರೆ. ಜನಸಾಂಧ್ರತೆಯನ್ನು ಆಧಾರವಾಗಿಟ್ಟುಕೊಂಡು ಮಾಡಬೇಕೆಂದು ನಿರ್ದೇಶನ ಇದೆ. ಬೆಂಗಳೂರು ಡಿವಿಷನ್‌ನಲ್ಲಿ ಸರಾಸರಿ ೧೦ ಸಾವಿರ ಜನಸಂಖ್ಯೆಗೆ ಒಂದು ಮಂಡಲ ಆಗಬೇಕೆಂದು ಮಾಡಿದ್ದೇವೆ, ಜನಸಾಂಧ್ರತೆಯ ಆಧಾರದ ಮೇಲೆ ಮತ್ತು ವೈಜ್ಞಾನಿಕ ಸೂತ್ರವನ್ನು ಅನುಸರಿಸಿ ಹೇಳಿದ್ದೇವೆ. ಬೆಳಗಾಂ ಡಿವಿಷನ್‌ನಲ್ಲಿ ಖಾನಾಪುರದಲ್ಲಿ ೬ ಸಾವಿರಕ್ಕೆ ಆಗಬೇಕೆಂದು ಬಿಟ್ಟರೆ ಬೇರೆಲ್ಲಾ ಬಿಜಾಪುರದಲ್ಲಿ ೮ ಸಾವಿರಕ್ಕೆ ಉತ್ತರ ಕನ್ನಡದಲ್ಲಿ ೬ ಸಾವಿರ, ಧಾರವಾಡ ಮತ್ತು ಬೆಳಗಾಂನಲ್ಲಿ ಸರಾಸರಿ ೧೦ ೧೦ ಸಾವಿರಕ್ಕೆ ಆ ಜಿಲ್ಲೆಯಲ್ಲಿ ಮಂಡಲ ಆಗಬೇಕೆಂದು ಮಾಡಿದ್ದಾರೆ. ಗುಲ್ಬರ್ಗ ಡಿವಿಷನ್‌ನಲ್ಲಿ ಬಳ್ಳಾರಿಯಲ್ಲಿ ೮ ಸಾವಿರ, ಗುಲ್ಬರ್ಗದಲ್ಲಿ ೮ ಸಾವಿರ ಮತ್ತು ರಾಯಚೂರು ೮ ಸಾವಿರ ಹಾಗೂ ಬೀದರ್‌ನಲ್ಲಿ ೧೦ ಸಾವಿರಕ್ಕೆ ಮಾಡಿದ್ದಾರೆ. ಜನಸಾಂಧ್ರತೆಯ ಆಧಾರದ ಮೇಲೆ ಗಡಿ ವಿಂಗಡಣೆ ಆಗಬೇಕು. ಚಿಕ್ಕಮಗಳೂರಿನಲ್ಲಿ ೬ ಸಾವಿರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦ ಸಾವಿರಕ್ಕೆ ಮಾಡಲಾಗಿದೆ. ಗುಡ್ಡಗಾಡು ಪ್ರದೇಶ ಬಿಟ್ಟು ಹಾಸನದಲ್ಲಿ ೧೦ ಸಾವಿರ, ಕೊಡಗಿನಲ್ಲಿ ೬ ಸಾವಿರ, ಸಕಲೇಶಪುರದಲ್ಲಿ ೬ ಸಾವಿರ, ಮಂಡ್ಯ ಮತ್ತು ಮೈಸೂರಿನಲ್ಲಿ ೧೦ ಸಾವಿರಕ್ಕೆ ಮಾಡಿದ್ದೇವೆ. ಜಿಲ್ಲೆಗಳಿಂದ ಬಂದಿರುವ ವರದಿಯಲ್ಲಿ ಕೆಲವು ಕಡೆ ಸೂತ್ರಕ್ಕೆ ಅನುಗುಣವಾಗಿಲ್ಲವೆಂದು ಅಲ್ಪಸ್ವಲ್ಪ ಬದಲಾವಣೆ ಮಾಡಿದ್ದೇವೆ. ಶ್ರೀನಿವಾಸ್ ಅವರು ಹೇಳಿದ ಹಾಗೆ ೧೦ ಮಂಡಲಗಳನ್ನು ಸೇರಿಸಿ ಮಾಡಿದ್ದರೆ ನಾವು ೮ ಮಾಡಿದ್ದೇವೆ. ಯೂನಿಫಾರ್ಮಿಟಿ ಇರಲಿ ಎಂದು ಮಾಡಿದ್ದೇವೆ. ಅಂಥ ಕಡೆ ಸ್ವಲ್ಪ ವ್ಯತ್ಯಾಸ ಆಗಿದೆ. ಆ ಗ್ರಾಮ ಇಲ್ಲಿ ಹೋಗಿದೆ, ಈ ಗ್ರಾಮ ಅಲ್ಲಿ ಹೋಗಿದೆ. ಸಾಧಾರಣವಾಗಿ ಭೂಗೋಳಿಕ ವಿಸ್ತೀರ್ಣವನ್ನಿಟ್ಟುಕೊಂಡು ನಾವು ಮಾಡಿದ್ದೇವೆ. ಕೇಂದ್ರ ಸ್ಥಳವನ್ನು ಮಾಡುವಾಗ ನಾನು ಮೊದಲೇ ಹೇಳಿದ ಹಾಗೆ ಹೋಬಳಿ ಹೆಡ್‌ಕ್ವಾರ್ಟರ್ಸ್‌ಗೆ ಪ್ರಥಮ ಸ್ಥಾನ ಕೊಡಲಾಗಿದೆ. ಅಂಥದ್ದು ೮೦೦ ಮಾಡಿದ್ದೇವೆ. ಈ ಬಗ್ಗೆ ಸಾಕಷ್ಟು ವಿಚಾರ ಆಗಿದೆ. ಶಾಸನದಲ್ಲಿ ಏನಿದೆ ? ಮೊದಲನೇ ಒಂದು ಹಂತ ನೋಟಿಫಿಕೇಷನ್ ಆದಮೇಲೆ ೩೦ ದಿನಗಳ ಕಾಲ ಅಪೀಲ್ ಹಾಕಿಕೊಳ್ಳುವ ಅವಕಾಶ ಉಂಟು. ಡಿವಿಷನಲ್ ಕಮೀಷನರ್ ಲೆವೆಲ್‌ನಲ್ಲಿ ಅಪೀಲ್ ಮುಗಿದಮೇಲೆ ಮೇಲ್ಮನವಿಯನ್ನು ಹೈಕೋರ್ಟಿಗೆ ನನ್ನ ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ನಮಗೆ ಎಷ್ಟು ಅಪೀಲ್ ಬಂದವು ಎಂಬ ಬಗ್ಗೆ ಅಂಕಿಅಂಶಗಳು ಹತ್ತಿರ ಇದೆ.ಬೆಂಗಳೂರು ಡಿವಿಷನ್‌ನಲ್ಲಿ ೩೬೬ ಅಪಿಕೇಷನ್ಸ್ ರಿವಿಷನ್ ಪಿಟಿಷನ್ ಬಂತು. ಮೈಸೂರಿನಲ್ಲಿ ೨೨೧ ಬಂತು. ಬೆಳಗಾಂನಲ್ಲಿ ೩೩೩ ಬಂತು. ಗುಲ್ಬರ್ಗದಲ್ಲಿ ೧೮೮ ಬಂತು. ತೀರ್ಮಾನ

ಮಾಡಿದ ಅರ್ಜಿಗಳು ೧೩೭ ಬೆಂಗಳೂರು ಡಿವಿಷನ್‌ನಲ್ಲಿ, ೭೯ ಮೈಸೂರು ಡಿವಿಷನ್‌ನಲ್ಲಿ, ೬೩ ಬೆಳಗಾಂ ಡಿವಿಷನ್‌ನಲ್ಲಿ, ೪೮ ಗುಲ್ಬರ್ಗ ಡಿವಿಷನ್‌ನಲ್ಲಿ. ಸ್ವೀಕಾರ ಆಗದೇ ಇರುವ ಅರ್ಜಿಗಳು ಬೆಂಗಳೂರಿನಲ್ಲಿ ೨೫, ಮೈಸೂರಿನಲ್ಲಿ ೧೪೨, ಬೆಳಗಾಂನಲ್ಲಿ ೨೭೦, ಗುಲ್ಬರ್ಗದಲ್ಲಿ ೧೧೫, ಇದಲ್ಲದೆ ಕಾನೂನು ಪ್ರಕಾರ ಡಿವಿಷನಲ್ ಕಮಿಷನರ್ ಅವರು ಸ್ಕ್ಯಾ-ಮೋಟೋ ಕೇಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇಂಥ ಕಡೆ ನಿರ್ದೇಶನ ಅಥವಾ ಕಾನೂನು ಉಲ್ಲಂಘನೆಯಾಗಿದೆ ಎಂಬುದು ಅವರ ಗಮನಕ್ಕೆ ಬಂದರೆ ಅವರೇ ತೆಗೆದು ರಿವಿಷನ್ ಮಾಡಬಹುದಾಗಿದೆ. ಅಂಥದ್ದು ಬೆಂಗಳೂರಿನಲ್ಲಿ ೨, ಮೈಸೂರಿನಲ್ಲಿ ೭ ಮತ್ತು ಗುಲ್ಬರ್ಗದಲ್ಲಿ ೯ ಆಗಿದೆ. ತೀರ್ಮಾನ ಆಗಿರತಕ್ಕದ್ದು ಬೆಂಗಳೂರಿನಲ್ಲಿ ೨, ಮೈಸೂರಿನಲ್ಲಿ ೭ ಆಗಿದೆ. ಗುಲ್ಬರ್ಗದಲ್ಲಿ ಒಂದೂ ಕೂಡ ತೀರ್ಮಾನ ಆಗಿಲ್ಲ. ಈ ರೀತಿ ಮೇಲ್ಮನವಿ ಆದಮೇಲೆ ೧೫೮ ರಿಟ್ ಅರ್ಜಿಗಳೂ ಕೂಡ ಹೈಕೋರ್ಟಿನಲ್ಲಿವೆ. ಅವರ ನಿರ್ಧಾರ ಇನ್ನೂ ನಮ್ಮ ಕೈಸೇರಿಲ್ಲ. ಕೆಲವು ವಜಾ ಆಗಿದೆ. ಕೆಲವು ವಿಚಾರಣಾ ಹಂತದಲ್ಲಿದೆ. ಸುಮಾರು ೫೨ ಸಾವಿರ ಕ್ಷೇತ್ರಗಳನ್ನು ಮಾಡುವಾಗ ಮಂಡಲ್ ಪಂಚಾಯಿತಿಗೆ ಹಾಗೂ ೯೧೦ ಜಿಲ್ಲಾ ಪರಿಷತ್ ಕ್ಷೇತ್ರಗಳಿಗೆ ವಿಂಗಡಣೆ ಮಾಡುವಾಗ ಮೇಲ್ಮನವಿ ಆಗಿರತಕ್ಕದ್ದು ಕೇವಲ ೧೫೮ ಎಲ್ಲಾ ತೃಪ್ತಿಕರವಾಗಿದೆ ಎಂದು ಹೇಳುವುದಿಲ್ಲ. ಆದರೆ ಬಹುಪಾಲು ತೃಪ್ತಿಕರವಾಗಿದೆ. ಇದರಿಂದ ಹೆಚ್ಚು ಮೇಲ್ಮನವಿಗಳು ಬಂದಿಲ್ಲ ಎಂದು ಹೇಳುತ್ತಿದ್ದೇನೆ. ನಿನ್ನೆ ಒಂದು ಮಾತನ್ನು ಹೇಳಿದ್ದೆ. ಹೇರಳವಾಗಿ ಕಾನೂನು ಉಲ್ಲಂಘನೆಯಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತಂದರೆ ಪುನರ್‌ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಈಗಿನ ಶಾಸನದ ಪ್ರಕಾರ ಸರ್ಕಾರಕ್ಕೆ ಮೇಲ್ಮನವಿ ಅಧಿಕಾರ ಇಲ್ಲ. ಯಾವುದೇ ದೃಷ್ಟಿಯಿಂದ ಇದನ್ನು ವಾಪಸ್ ತೆಗೆದುಕೊಳ್ಳಲು ಸಾಧ್ಯವಿಲ್ಲ. ಚುನಾವಣೆಯನ್ನು ನವೆಂಬರ್‌ನಲ್ಲಿ ಮಾಡಬೇಕೆಂದಿರುವುದರಿಂದ ಮಂತ್ರಿ ನೋಟಿಫಿಕೇಷನ್ ಮಾಡಿ ಅಮೆಂಡ್‌ಮೆಂಟ್ ಮಾಡಬೇಕಾದರೆ ಚುನಾವಣೆ ಮುಂದೆ ಹೋಗಬೇಕಾಗುತ್ತದಾದ್ದರಿಂದ ಹಾಗೆ ನಾವು ಮಾಡುವುದಿಲ್ಲ. ಚುನಾವಣೆಯನ್ನು ಮುಂದೂಡುವುದಕ್ಕೆ ಸರ್ಕಾರಕ್ಕೆ ಇಷ್ಟವಿಲ್ಲ. ಇದರಲ್ಲಿ ಸರ್ಕಾರಕ್ಕೆ ವಿಶ್ವಾಸವಿಲ್ಲ. ನವೆಂಬರ್‌ನಲ್ಲಿ ಚುನಾವಣೆ ಮಾಡಬೇಕಾಗಿರುವುದರಿಂದ ಈ ಹಂತದಲ್ಲಿ ಸರಿಪಡಿಸುವುದು ಕಷ್ಟ ಇದೆ. ಒಂದು ಅವಕಾಶ ಇದೆ. ಚುನಾಯಿತ ಸಂಸ್ಥೆಗಳು ಅಧಿಕಾರಕ್ಕೆ ಬಂದ ಮೇಲೆ ಅವುಗಳಿಗೆ ಕ್ಷೇತ್ರ ವಿಂಗಡಣೆ ಅಥವಾ ಸಮೂಹಗಳನ್ನು ಬದಲಾವಣೆ ಮಾಡುವ ಅಧಿಕಾರವನ್ನು ಶಾಸನಬದ್ಧವಾಗಿ ಕೊಟ್ಟಿದ್ದೇವೆ. ಅವು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಮಾಡಿ ಕೊಳ್ಳುವ ಅಧಿಕಾರ ಕೊಟ್ಟಿದ್ದೇವೆ. ಪ್ರಥಮ ಹಂತದಲ್ಲಿ ಏನು ಮಾಡಬೇಕಾಗಿದೆಯೋ ಅದನ್ನು ನಾವು ಮಾಡಿದ್ದೇವೆ. ಇದರಿಂದ ಬಹಳ ಜನರಿಗೆ ತೃಪ್ತಿ ಇಲ್ಲ ಎಂಬುದು ನನಗೆ ಗೊತ್ತು. ಅಂದಮಾತ್ರಕ್ಕೆ ಕಾನೂನು ಭಂಗ ವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ಚೌಡಯ್ಯ.—ಅವರೇ ಹೇಳುತ್ತಿದ್ದಾರೆ ತೃಪ್ತಿ ಇಲ್ಲ ಎಂದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಯಾವ ಡೀಲಿಮಿಟೇಷನ್‌ನಲ್ಲಿ ತೃಪ್ತಿ ಮಾಡುವುದಕ್ಕೆ ಸಾಧ್ಯ ನೀವು ಹಳ್ಳಿಯಿಂದ ಬಂದವರು. ಹೇಗೆ ತೃಪ್ತಿ ಮಾಡುವುದಕ್ಕೆ ಸಾಧ್ಯ ನೀವೇ ಹೇಳಿ. ನಿನ್ನೆ ಮೊಯಿಲಿಯಪ್ಪರು ಮಾತನಾಡುವಾಗ ಹೇಳಿದರು, ''ನೋಡಿ, ಅಮರನಾಥಶೆಟ್ಟರ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ೪ ಜನರಲ್ ಮಾಡಿದ್ದೀರಿ, ನಮ್ಮ ಕ್ಷೇತ್ರದಲ್ಲಿ ಎಲ್ಲ ಕೂಡ ರಿಸರ್ವ್ ಮಾಡಿದ್ದೀರಿ'' ಎಂದು ಹೇಳಿದರು. ಸಾಲಿಯಾನ ಅವರ ಕಾನ್‌ಸ್ಟಿಟ್ಯುಯೆನ್ಸಿ ಉದಾಹರಣೆ ಕೊಟ್ಟರು. ತಮಗೆ ಗೊತ್ತಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಪಕ್ಷ ಗೆದ್ದಿರತಕ್ಕದ್ದು ಒಂದೇ ಕಡೆ. ಕಾರ್ಕಳದಲ್ಲಿ ೭ ಸೀಟು ಇದೆ, ಆದರಲ್ಲಿ ೪ ವೀರಪ್ಪ ಮೊಯಿಲಿ ಅವರ ಕ್ಷೇತ್ರಕ್ಕೆ ಬರತಕ್ಕದ್ದು, ೩ ಅಮರನಾಥಶೆಟ್ಟರ ಕ್ಷೇತ್ರಕ್ಕೆ ಬರತಕ್ಕದ್ದು. ಈ ನಾಲ್ಕರಲ್ಲಿ ೩ ರಿಸರ್ವ್ ಆಗಿದ್ದು ೨ ಹೆಣ್ಣುಮಕ್ಕಳದ್ದು ಹಾಗೂ ಒಂದು ಎಸ್. ಸಿ. ಗಳದ್ದು ಇದೆ. ಉಡುಪಿ ತಾಲ್ಲೂಕು ಸಾಲಿಯಾನರವರ ಕ್ಷೇತ್ರದಲ್ಲಿ ೧೩ ಸೀಟ್ ಇವೆ. ಇವುಗಳಲ್ಲಿ ೬ ರಿಸರ್ವ್ ಇದ್ದು ೭ ಜನರಲ್ ಇವೆ. ಕಾಪು, ಬ್ರಾಹ್ಮಣರ ಹಾಗೂ ಉಡುಪಿಯಲ್ಲಿ ಕಾಂಗ್ರೆಸ್-ಐ ಪಕ್ಷದವರೇ ಗೆದ್ದಿದ್ದಾರೆ. ಅಲ್ಲಿ ಇರುವ ೬ ಕ್ಷೇತ್ರಗಳಲ್ಲಿ ೪ ಹೆಣ್ಣುಮಕ್ಕಳಿಗೆ ಹಾಗೂ ೨ ಎಸ್. ಸಿ. ಎಸ್.ಟಿ. ಯವರಿಗೆ ಹೋಗಿದೆ ಮತ್ತೆ ೭ ರಿಸರ್ವ್ ಇದೆ. ಹೇಗೆ ಅನ್ಯಾಯವಾಯಿತು? ಹೀಗಾಗಿದೆ ಹಾಗಾಗಿದೆ ಎಂದರೆ ಹೇಗೆ? ಹೆಬ್ರಿ ಎನ್ನತಕ್ಕದ್ದರಲ್ಲಿ ೧೬ ಸಾವಿರ ಜನಸಂಖ್ಯೆ ಮಾಡಿದ್ದೀರಿ ಎಂದಿದ್ದೀರಿ. ಕಾನೂನು ವಿರುದ್ಧ ಮಾಡುವುದಕ್ಕೆ ಬರುವುದಿಲ್ಲ. ೮ ರಿಂದ ೧೨ ಸಾವಿರದ ವರೆಗೆ ಮಾತ್ರ ಮಂಡಲಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ೧೨ ಸಾವಿರ ಮಾಡಿದ್ದೀರೆಂದು ಹೇಳಿದಿರಿ. ಹೆಬ್ರಿಯ ಜನಸಂಖ್ಯೆ ೧೧,೫೬೪. ಇರತಕ್ಕ

ಅಂಕಿಅಂಶಗಳನ್ನು ಇಡುತ್ತಿದ್ದೇನೆ. ಹೆಣ್ಣುಮಕ್ಕಳು ಹೆಚ್ಚು ಇರುವ ಕಡೆ ಸೀಟ್ ರಿಸರ್ವ್ ಮಾಡಿ ಎಂದು ಹೇಳಿದ್ದೇವೆ. ಎಲ್ಲಾದರೂ ಉಲ್ಲಂಘನೆ ಆಗಿದ್ದರೆ ಹೇಳಿ. ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಇರುವ ಕಡೆ ರಿಸರ್ವ್ ಮಾಡಿ ಎಂದೇ ಹೇಳಿದ್ದೇವೆ, ಒಟ್ಟಿಗೆ ಶೇಕಡಾ ೪೫ ರಷ್ಟು ರಿಸರ್ವ್ ಬಂದಿರುವುದು ಸ್ವಲ್ಪ ಕಷ್ಟಕ್ಕೆ ಬರುತ್ತದೆ. ರಾಜ್ಯಸ್ವಾಮಿಯವರ ಕ್ಷೇತ್ರದಲ್ಲಿ ೩ ಕ್ಷೇತ್ರ ರಿಸರ್ವ್ ಆಗಿದ್ದು ೧ ಜನರಲ್ ಆಗಿದೆ. ಹಾಗೇ ಪುಟ್ಟಸ್ವಾಮಿಯವರ ಕ್ಷೇತ್ರದಲ್ಲಿ ೨ ರಿಸರ್ವ್ ಹಾಗೂ ೨ ಜನರಲ್ ಆಗಿದೆ. ಅಲ್ಲೂ ಸರಿಮಾಡುವುದಕ್ಕೆ ಆಗಿಲ್ಲ. ಕ್ಷೇತ್ರ ವಿಂಗಡಣೆ ಆಗುವಾಗ ಸಾಧಾರಣವಾಗಿ ಅತೃಪ್ತಿ ಇರುತ್ತದೆ. ನನ್ನೂರು ಅಲ್ಲಿ ಸೇರಬೇಕಂ ಇಲ್ಲಿ ಸೇರಬೇಕು ಎಂದು ಹೇಳುತ್ತಾರೆ. ೮೬ರ ಮಾರ್ಚ್ ೧೬ಕ್ಕೆ ಎಲ್ಲಾ ಮುಗಿದಿದೆ. ಎಲ್ಲಾ ವಿವರಗಳನ್ನು ಕೊಡಲು ಬಹಳ ಹೊತ್ತು ಹಿಡಿಯುತ್ತದೆ. ರಿಸರ್ವೇಷನ್ ಬಗ್ಗೆ ಹೇಳುವುದಾದರೆ ೯೧೦ ಕ್ಷೇತ್ರಗಳು ಇದ್ದು ಅದರಲ್ಲಿ ಹೆಣ್ಣುಮಕ್ಕಳಿಗೆ ೨೧೭ ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ೧೮೨ ಹಾಗೂ ೪೫ ಸಾಮಾನ್ಯ ಕ್ಷೇತ್ರಗಳು ಇವೆ. ಇದನ್ನು ಮಾಡುವಾಗ ಯಾವುದೇ ತಾರತಮ್ಯ ಮಾಡಿಲ್ಲ ನಿಯಮಕ್ಕನುಗುಣವಾಗಿ ಹೆಣ್ಣುಮಕ್ಕಳು ಹೆಚ್ಚು ಇರುವ ಕಡೆ ಹೆಣ್ಣುಮಕ್ಕಳಿಗೆ ಹಾಗೂ ಎಸ್.ಸಿ. ಎಸ್.ಟಿ. ಹೆಚ್ಚು ಇರುವ ಕಡೆ ಅವರಿಗೆ ರಿಸರ್ವೇಷನ್ ಕೊಟ್ಟಿದ್ದೇವೆ. ಎಲ್ಲಾದರೂ ನಿಯಮ ಉಲ್ಲಂಘನೆ ಆಗಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಮತ್ತೆ ಎರಡು ಮಂಡಲಗಳನ್ನು ದಾಟಿ ಹೋಗತಕ್ಕ ಉದಾಹರಣೆಯನ್ನು ಕೆ. ಎಚ್. ಪಾಟೀಲರು ಹೇಳಿದರು. ಒಂದು ಮಂಡಲ ಇನ್ನೊಂದು ಮಂಡಲಕ್ಕೆ ಹೋಗಿರತಕ್ಕದ್ದನ್ನು ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ಇಲ್ಲಿ ಸಾಕಷ್ಟು ದಾಖಲೆಗಳು ಇಲ್ಲ. ಬರೀ ಮ್ಯಾಪ್ ನೋಡಿದರೆ ಎಲ್ಲಾ ಸರಿಯಾಗೇ ಕಾಣುತ್ತದೆ, ದಯವಿಟ್ಟು ಈ ಪ್ರಶ್ನೆಗಳನ್ನು ವಿಶಾಲ ಭಾವನೆಯಿಂದ ನೋಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಪಾರ್ಟಿಯವರಿಗೆ ತಾತ್ವಿಕವಾಗಿ ವಿರೋಧ ಇದೆ. ಅಳಿದುಳಿದಿರತಕ್ಕ ಪಾಳೇಗಾರಿಕೆಯನ್ನು ಬೆಳೆಸುವ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡಿದ್ದೀರಿ ಎಂದು ಕೆ. ಎಚ್. ಶ್ರೀನಿವಾಸ್ ಅವರು ತಾತ್ವಿಕವಾಗಿ ಹೇಳಿದರು. ಪಾಳೇಗಾರಿಕೆಯನ್ನು ಈ ಸಂಸ್ಥೆಗಳು ಉಳಿಸುವುದಿಲ್ಲ ರಾಷ್ಟ್ರೀಯ ವ್ಯವಸ್ಥೆಯಲ್ಲಿ, ಪಾಳೇಗಾರಿಕೆಯು ಆರ್ಥಿಕ ವ್ಯವಸ್ಥೆಯು ಗುಲಾಮರಾಗಿ ನಾವು ೪೦ ವರ್ಷ ಸೇವೆ ಮಾಡಿ ಈ ಹೊತ್ತು ಪಾಳೆಗಾರಿಕೆ ಬಗ್ಗೆ ಮಾತನಾಡಿದರೆ, ಪಾಳೆಗಾರಿಕೆ ಹೋಗುವುದಿಲ್ಲ ಈ ಸಂಸ್ಥೆಗಳು ಪಾಳೆಗಾರಿಕೆಯನ್ನು ನಿರ್ನಾಮ ಮಾಡುವುದಕ್ಕೆ ಹೊರಟಿರತಕ್ಕದ್ದು. ಅದಕ್ಕೆ ಇದು ಮೊದಲ ಹಂತ. ಪಾಳೇಗಾರಿಕೆಯನ್ನು ಕಾಪಾಡುವ ಸಂಸ್ಥೆಗಳು ಇವಲ್ಲ, ಇಲ್ಲಿ ಕಾನೂನು ದುರುಪಯೋಗ ಆಗಿಲ್ಲ. ದಯವಿಟ್ಟು ಯಾರು ತಪ್ಪು ತಿಳಿದುಕೊಳ್ಳಬೇಡಿ. ನಾವು ನಿಸ್ಪಕ್ಷಪಾತವಾಗಿ ಮಾಡಿದ್ದೇವೆ ಎನ್ನುವುದು ಒಂದೇ...

ಶ್ರೀ ಧರ್ಮಸಿಂಗ್.—ನೀವು ಮಾಹಿತಿಯನ್ನು ನಿಮ್ಮ ರಮೇಶ್ ಕುಮಾರ್ ಅವರೇ ಒಪ್ಪುತ್ತಾರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಜಾತೀಯ ದೃಷ್ಟಿಯಿಂದ ನಾವು ಕ್ಷೇತ್ರಗಳನ್ನು ಮಾಡುವುದಕ್ಕೆ ಕಷ್ಟವಾಗಬಹುದು. ದುರ್ಬಲವರ್ಗದವರಿಗೆ ಗೆಲ್ಲಿಸತಕ್ಕ ಕ್ಷೇತ್ರಗಳನ್ನು ಮಾಡುವುದಕ್ಕೆ ಬಹಳ ಕಷ್ಟವಾಗಬಹುದು. ಪಂಥ್ತು ಅದು ಆಗುವುದೂ ಇಲ್ಲ. ನಾನು ಮೊದಲೇ ಹೇಳಿದ ಪ್ರಕಾರ ರಾಜಕೀಯ ಕಣದಲ್ಲಿ ಹಿಂದುಳಿದವರು, ಮುಖಂಡರು, ಆರ್ಥಿಕವಾಗಿ ಹಿಂದುಳಿದವರು, ದುರ್ಬಲವರ್ಗದವರಂ ಗೆದ್ದುಬರಬೇಕೇ ಹೊರತು ಕಾನ್‌ಸ್ಟಿಟ್ಯೂಯೆನ್ಸಿ ಮಾಡಿ ಗೆಲ್ಲಿಸುತ್ತೇವೆನ್ನುವುದು ಅಸಾಧ್ಯವಾದುದು, ಅವ್ಯವಹಾರಿಕವಾದುದು ಅವೈಜ್ಞಾನಿಕವಾದುದು ಎಂದು ಹೇಳಿ ಆ ದೃಷ್ಟಿಯಿಂದ ಇದನ್ನು ಮಾಡಿರತಕ್ಕದ್ದಂ. ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ದೋಷಪೂರ್ಣವಾಗಿದ್ದರೆ. ಚುನಾವಣೆಗಳ ನಂತರ ಬರತಕ್ಕ ಸಂಸ್ಥೆಗಳು ಅದನ್ನು ಸರಿಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದೇವೆ. ಆದ್ದರಿಂದ ಚುನಾವಣೆಗಳನ್ನು ಬೇಗ ಮಾಡೋಣ. ಚುನಾವಣೆಗಳು ಬೇಡ ಎಂದು ಹೇಳುವುದು ಬೇಡ. ನವೆಂಬರ್ ಕೊನೆವಾರದಲ್ಲಿ ಚುನಾವಣೆಗಳನ್ನು ಮಾಡುತ್ತೇವೆ. ಮತ್ತೆ ನಾವುಕಾನೂನು ತಿದ್ದುಪಡಿ ಮಾಡಬೇಕಾಗಿ ಬಂದರೆ ಚುನಾವಣೆಗಳು ಆಗುವುದಿಲ್ಲ. ಆ ಸಂಸ್ಥೆಗಳಿಗೇ ಸರಿಮಾಡುವುದಕ್ಕೆ ಅಧಿಕಾರ ಕೊಟ್ಟಿರುವುದರಿಂದ ಅನ್ಯಾಯವಾಗಿದ್ದರೆ ಅದನ್ನು ಸರಿಮಾಡಿಕೊಳ್ಳುತ್ತಾರೆ ನಾವು ಚುನಾವಣೆಯನ್ನು ಎದುರಿಸೋಣ. ಜನ ನಿಮ್ಮನ್ನು ಗೆಲ್ಲಿಸಿದರೆ ನೀವು ಬನ್ನಿ ನಮ್ಮನ್ನು ಗೆಲ್ಲಿಸಿದರೆ ನಾವು ಬರಂತ್ತೇವೆ. ಪಕ್ಷಕ್ಕಾಗಲೀ, ವರ್ಗಕ್ಕಾಗಲೀ, ಜಾತಿಗಾಗಿ

ಯಾಗಲೀ ನಿರ್ಮಾಣ ಮಾಡಿರತಕ್ಕ ಸಂಸ್ಥೆಗಳು ಇವಲ್ಲವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಜನ ಯಾರನ್ನು ಆರಿಸುತ್ತಾರೋ ಅವರು ಅಧಿಕಾರಕ್ಕೆ ಬರುತ್ತಾರೆ. ಅದು ಪ್ರಶ್ನೆಯಲ್ಲ ಯಾರೂ ಇಲ್ಲಿ ಗೂಟ ಹೊಡೆದು ಕೊಂಡು ಇರುವುದಿಲ್ಲ. ಡೆವಲಪ್‌ಮೆಂಟ್ ಮಾಡಬೇಕೆಂದು ಹೇಳಿ ಡೀಸೆಂಟ್ರಲೈಸ್ ಮಾಡಿದ್ದು. ಆನೇಕ ಕಡೆ ಇನ್‌ಜಸ್ಟೀಸ್ ಆಗಿದ್ದರೆ ಅದನ್ನು ಸರಿಪಡಿಸಬಾರದೇ ಟೈಮ್ ಇಲ್ಲ ಎಂದರೆ ಹೇಗೆ? ಟೈಮ್ ಇಲ್ಲ ಎಂದು ಜನರನ್ನು ಕೊಲ್ಲುತ್ತೀರಾ? ೫ ರಿಂದ ೧೦ ಕಿಲೋಮೀಟರ್ ದಾಟಿ ಹೋಗತಕ್ಕ ರೀತಿಯಲ್ಲಿ ಹಳ್ಳಿಗಳನ್ನು ಮಂಡಲ್ ಪಂಚಾಯಿತಿಗೆ ಸೇರಿಸಿದ್ದೀರಿ. ಅದನ್ನು ನಾನು ಹೇಳಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಲ್ಲಿ ಇಲ್ಲಿ ಎಂದು ಹೇಳಿದ್ದೇನೆಯೇ ಹೊರತು ತಮ್ಮ ಕ್ಷೇತ್ರದಲ್ಲಿ ೧೬ ಮಂಡಲ ..

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅದನ್ನು ಸರಿಪಡಿಸತಕ್ಕದ್ದಾರ ಬಗ್ಗೆ ತಾವು ಒಪ್ಪಿಕೊಳ್ಳಬೇಕು. ಘೋಷಣೆ ಮಾಡಿದ್ದೇವೆ, ಚುನಾವಣೆ ಮಾಡಿಯೇ ತೀರುತ್ತೇವೆ ಎನ್ನುವುದು ಪೊಂದುವಾದ ವಾಗುತ್ತದೆ. ಇದರಿಂದ ಪ್ರಯೋಜನವಾಗುವುದಿಲ್ಲ. ಜನರಿಗೆ ಏನು ಅನುಕೂಲ ಮಾಡಬೇಕು, ಡೀಸೆಂಟ್ರಲೈಸ್ ಮಾಡಬೇಕು ಎನ್ನುವ ಉದ್ದೇಶ ಇದೆ ಅದು ಆಗುವುದಿಲ್ಲ. ಇದರಿಂದ ಮತ್ತೆ ಎಕ್ಸ್‌ಪ್ಲಾಯ್‌ಟೇಷನ್ ಪ್ರಾರಂಭವಾಗುತ್ತದೆ. ಬಡವರ ಬಗ್ಗೆ ಆಸಕ್ತಿ ಇರುವ ಈ ಸರ್ಕಾರದ ಜಾಲಪ್ಪನವರಿಗೆ ನಾನು ಒಂದು ಪ್ರಶ್ನೆ ಕೇಳಿದ್ದೆ. ಕರ್ನಾಟಕ ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆಕ್ಟ್ ಕೆಳಗೆ ಎಷ್ಟು ಜನರಿಗೆ ರಿಲೀಫ್ ಕೊಟ್ಟಿದ್ದೀರಿ ಎಂದಿದ್ದಕ್ಕೆ ಮಾಹಿತಿ ಇಲ್ಲ ಎಂದು ಎರಡು ಸಲ ಹೇಳಿದರು. ನಾಳೆ ಮತ್ತೆ ಪ್ರಾರಂಭ ಆಗುತ್ತದೆ. ಒಂದು ಚೀಲ ರಾಗಿ ಜೋಳ ಕೊಟ್ಟರೆ ಎರಡು ಚೀಲ ವಸೂಲಿ ಮಾಡುತ್ತಾರೆ. ಯುಗಾದಿಯ ರಾಶಿ ಟೈಮ್‌ನಲ್ಲಿ ಬಂದು ಎರಡೆರಡು ಚೀಲ ವಸೂಲಿ ಮಾಡುತ್ತಾರೆ, ಆ ಪದ್ಧತಿ ಈಗಾಗಲೇ ಶುರುವಾಗಿದೆ.

ಬಡವರಿಗೆ ಒಂದು ಚೀಲ ಜೋಳವನ್ನು ಈಸಾರಿ ಕೊಟ್ಟರೆ ಮತ್ತೆ ಯುಗಾದಿ ಸಮಯದಲ್ಲಿ ಆ ವ್ಯಕ್ತಿ ಹೋಗಿ ಅದೇ ಬಡವನಿಂದ ೨ ಚೀಲ ಜೋಳವನ್ನು ವಸೂಲ್ಮಾಡಿಕೊಂಡು ಬರುತ್ತಾನೆ. ಇಂಥ ಕೇಸುಗಳನ್ನು ಎಷ್ಟು ಇತ್ಯರ್ಥ ಮಾಡಿದ್ದೀರಿ ಎಂದು ನಾನು ಕೇಳಿದಾಗ ನಮ್ಮಲ್ಲಿ ಆಂಕಿಅಂಶಗಳಿಲ್ಲ ವೆಂದು ಹೇಳಿದರು. ಸ್ವಾಮಿ, ನಿಮ್ಮ ಹುಂಡೇಕಾರ್ ಕಮಿಟಿ ರಿಪೋರ್ಟ್ ಪ್ರಕಾರ ಬರುವ ನವೆಂಬರ್ ತಿಂಗಳೊಳಗಾಗಿ ಹೊಸದಾಗಿ ೬ ಜಿಲ್ಲೆಗಳನ್ನೂ ಮತ್ತು ೨೫ ತಾಲ್ಲೂಕುಗಳನ್ನೂ ವಿಂಗಡಣೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಆದ್ದರಿಂದ ನಾನಾದರೂ ಹೇಳುವುದೇನೆಂದರೆ, ಈಗ ನೀವು ಮಂಡಲ್ ಪಂಚಾಯತ್ ಚುನಾವಣೆಗೆ ಮತ ಕ್ಷೇತ್ರಗಳನ್ನು ವಿಂಗಡಣೆ ಮಾಡಿದರೆ ಮುಂದೆ ಹೊಸದಾಗಿ ಮಾಡತಕ್ಕ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ತೊಂದರೆಯಾಗುತ್ತದೆ, ಏಕೆಂದರೆ ಹಲವಾರು ಹಳ್ಳಿಗಳು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಅಥವಾ ಮತ ಕ್ಷೇತ್ರಕ್ಕೆ ಹೋಗುತ್ತವೆ. ಆಗ ಮತ್ತೆ ತೊಂದರೆಯಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಏನೂ ತೊಂದರೆಯಾಗುವುದಿಲ್ಲ. ಮೊದಲು ಮಂಡಲ್ ಪಂಚಾಯಿತ್ ಚುನಾವಣೆಗಳನ್ನು ಮಾಡಿ ನಂತರ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ನಜೀರ್ ಸಾಬ್‌ರವರೇ, ಎಲ್ಲ ಮಾನ್ಯ ಸದಸ್ಯರೂ ವಿವರಣೆಯನ್ನು ಕೇಳಿದಮೇಲೆ ತಾವು ಉತ್ತರ ಕೊಡಿ. ಅವರೆಲ್ಲರೂ ಹೇಳುವುದನ್ನು ಪೂರ್ತಿಯಾಗಿ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜಿಲ್ಲಾ ಪುನರ್ ವಿಂಗಡಣೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ಕೆಲಸವನ್ನು ಈಗಲೇ ಮಾಡಿದರೆ ಮುಂದೆ ಬಹಳ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಆಮೇಲೆ ಹಳ್ಳಿಗಳು ಅದಲುಬದಲು ಆಗುತ್ತವೆ. ಆದ್ದರಿಂದ ಇದನ್ನು ಯಾವರೀತಿ ಪುನರ್ ವಿಂಗಡಣೆ ಮಾಡುತ್ತೀರೋ ನೋಡಿಕೊಳ್ಳಿ. ಮತ್ತು ಅಲ್ಪಸ್ವಲ್ಪ ತಪ್ಪುಗಳು ಈಗ ಏನು ಆಗಿದೆ ಅದನ್ನೆಲ್ಲಾ ತಿದ್ದಿಕೊಳ್ಳಿ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್‌ಗಳ ಮತ ಕ್ಷೇತ್ರಗಳನ್ನು ಗುರ್ತಿಸಿ ನಂತರ ಚುನಾವಣೆಯನ್ನು ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜಿಲ್ಲೆ ಮತ್ತು ತಾಲ್ಲೂಕಿನ ರೀ ಆರ್ಗನೈಸೇಷನ್ ವಿಚಾರವನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಮಾತನಾಡುತ್ತಾ ಬರುವ ನವೆಂಬರ್ ತಿಂಗಳಲ್ಲಿ ಈ ವಿಚಾರವನ್ನು ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಯಾವ ಜಿಲ್ಲೆಯನ್ನು ಪುನರ್ ವಿಂಗಡಣೆ ಮಾಡಬೇಕು ? ಯಾವಾಗ ಮಾಡಬೇಕು ? ನಮ್ಮ ಆರ್ಥಿಕ ಪರಿಸ್ಥಿತಿ ಯಾವರೀತಿ ಇದೆ ? ಎಂಬುದನ್ನೆಲ್ಲಾ ನೋಡಿಕೊಂಡು ಮಾಡುತ್ತೇವೆಂದು ಹೇಳಿದ್ದಾರೆ ಈ ರೀತಿ ಜಿಲ್ಲೆ ಮತ್ತು ತಾಲ್ಲೂಕನ್ನು ಪುನರ್ ವಿಂಗಡಣೆ ಮಾಡಬೇಕೆಂದು ಹುಂಡೇಕಾರ್ ಕಮಿಟಿ ರಿಪೋರ್ಟ್ ಬಂದಿದೆ. ಇಲ್ಲಿ ನಿಮ್ಮ ಕಷ್ಟ ಏನು ಎಂಬುದು ನನಗೆ ಗೊತ್ತಿದೆ. ಈ ಚುನಾವಣೆ ಆದಮೇಲೆ ನಿಮ್ಮ ಪರಿಸ್ಥಿತಿ ಏನಾಗುತ್ತದೆಂಬುದು ನನಗೆ ಗೊತ್ತಿದೆ.....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಂದರೆ ಇದರ ಅರ್ಥ ಏನು ? ಈ ಚುನಾವಣೆ ಆದಮೇಲೆ ನಿಮಗೆ ಅನುಕೂಲವಾಗುತ್ತದೆ. ಅದನ್ನೇ ತಾನೆ ನೀವು ಹೇಳುತ್ತಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ ಚುನಾವಣೆ ಏನು ನಡೆಯುತ್ತದೆ ಅದಕ್ಕನುಗುಣವಾಗಿ ಈ ಕ್ಷೇತ್ರಗಳಿರುತ್ತವೆ. ಮಂಡಲ್ ಪಂಚಾಯಿತ್ ಚುನಾವಣೆಗಳಿಗೆ ಮತ ಕ್ಷೇತ್ರಗಳನ್ನು ವಿಂಗಡಿಸುವುದು ಸ್ಟ್ಯಾಟುಟರಿ ಪವರ್‌ಗೆ ಸೇರಿದೆ.....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ಟ್ಯಾಟುಟರಿ ಪವರ್‌ಗೆ ಬಿಟ್ಟಿದು ಎಂದು ನೀವು ಸುಮ್ಮನೆ ಇದ್ದಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ನಿಮಗೆ ಬೇಕಾದಂಥ ರೀತಿಯಲ್ಲಿ ಈ ಮತ ಕ್ಷೇತ್ರಗಳನ್ನು ವಿಂಗಡಣೆ ಮಾಡಿದ್ದೀರಿ. ಈ ದಿಸೆಯಲ್ಲಿ ಅನೇಕ ಅಧಿಕಾರಿಗಳು ತಪ್ಪು ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧಿಕಾರಿಗಳು ತಪ್ಪು ಆಜ್ಞೆಯನ್ನು ಮಾಡಿದ್ದಾರೆ. ಅದರ ಮೇಲೆ ಅಪೀಲು ಹೋಗುವುದಕ್ಕೆ ಅವಕಾಶ ಇದೆ. ಆದರಲ್ಲಿ ಹೈ ಕೋರ್ಟಿಗೆ ಹೋಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ನಜೀರ್ ಸಾಬ್‌ರವರು ನೀವು ಡಿವಿಜನಲ್ ಕಮಿಷನರ್‌ರವರ ಹತ್ತಿರ ಹೋಗಿ, ಇಲ್ಲವಿದ್ದರೆ ಮುಂದೆ ಹೈಕೋರ್ಟ್ ಇದೆ ಅಲ್ಲಿಗೆ ಬೇಕಾದರೂ ಹೋಗಿ ಎಂದು ಹೇಳಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ, ವಿಧಾನ ಸೌಧದ ತಿನೇ ಮಹಡಿಯ ಮೇಲೆ ಕೂತು ಹಾಲಿ ಜಾರಿಯಲ್ಲಿರತಕ್ಕ ಶಾಸನಕ್ಕೆ ವಿರುದ್ಧವಾಗಿ ನೀವು ಆಜ್ಞೆ ಮಾಡಿದ್ದೀರಲ್ಲ ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಶಾಸನಕ್ಕೆ ವಿರುದ್ಧವಾಗಿ ನಾವೇನಾದರೂ ಆಜ್ಞೆ ಮಾಡಿ ನಡೆದುಕೊಂಡಿದ್ದರೆ ಅಂಥ ಒಂದೇ ಒಂದು ಉದಾಹರಣೆಯನ್ನು ಕೊಡಿ. ಇಂಥಾ ಕಡೆ ಶಾಸನ ಉಲ್ಲಂಘನೆ ಯಾಗಿದೆ ಒಂದು ತೋರಿಸಿ ಕೊಡಿ ನೋಡೋಣ. ನಾನಾದರೂ ಹೇಳುತ್ತೇನೆ, ನಿಮ್ಮ ಹತ್ತಿರ ಒಂದು ಒಂದು ನಿದರ್ಶನವೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಧಾನಸಭೆ ಅಥವಾ ಲೋಕಸಭೆಯ ಚುನಾವಣೆಗೆ ಮತ ಕ್ಷೇತ್ರಗಳನ್ನು ಮಾಡುತ್ತೇವೆ. ಇದು ಹೊಸದೇನೂ ಅಲ್ಲ. ಯಾವ ಪಕ್ಷವೇ ಅಧಿಕಾರದಲ್ಲಿರಲಿ ಅದು ಅವರ ಕಾನೂನು ಚೌಕಟ್ಟಿನಲ್ಲಿ ಏನೇನು ಹೇಳಬೇಕೋ ಅದನ್ನು ಹೇಳುತ್ತಾರೆ. ಈ ಮತ ಕ್ಷೇತ್ರದ ವಿಂಗಡಣೆ ಪರಿಪೂರ್ಣವಾಗಿ, ದೋಷರಹಿತವಾಗಿದೆಯೆಂದು ನಾನು ಹೇಳುತ್ತಿಲ್ಲ. ನಾವು ಮೊದಲನೇ ಸಾರಿ ಇದನ್ನು ಮಾಡುತ್ತಿದ್ದೇವೆ. ದೋಷಗಳಿವೆ. ಇಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ಅದೇ ರೀತಿ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶವೂ ಇದೆ. ಅದನ್ನು ತಿದ್ದಿ ಕೊಳ್ಳೋಣ,

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ ಮತ್ತೆ ನಾವು ಸ್ಪಷ್ಟೀಕರಣವನ್ನು ಕೇಳುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಏಕೆಂದರೆ ಅವರ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದಕ್ಕಾಗಿಯೇ ಅವರು ಈರೀತಿ ಹೇಳಿದ್ದಾರೆ. ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳನ್ನು ಎದುರಿಸೋಣ ಎಂದು ಹೇಳಿದ್ದಾರೆ, ಆದಕ್ಕೆ ನಾವೂ ಕೂಡ ಸಿದ್ಧರಾಗಿದ್ದೇವೆ. ಆದರೆ ಆಗಿರತಕ್ಕ ತಪ್ಪನ್ನು ಸರಿಪಡಿಸಿಕೊಳ್ಳುವುದಕ್ಕೆ ಅವರಿಗೆ ಮನಸ್ಸಿಲ್ಲ, ಆದ್ದರಿಂದ ನಾವು ಅವರನ್ನು ವಿಪರಣೆ ಕೇಳಿ ಏನೂ ಪ್ರಯೋಜನವಿಲ್ಲವೆಂದು ಹೇಳಿ ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಂಕ್ತಾಯವಾಯಿತು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಕಾನೂನು ಉಲ್ಲಂಘನೆ ಆಗಿರತಕ್ಕದ್ದು ಒಂದೇ ಒಂದು ಉದಾಹರಣೆ ಇದ್ದರೂ ಹೇಳಿ ಎಂದು ಮಾನ್ಯ ಸಚಿವರು ಹೇಳಿದರು. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ನಿಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತಿದ್ದಾರೆ, ಇನ್ನೇ ತಕ್ಕೆ ಮಾತನಾಡುತ್ತೀರಿ ?

ಶ್ರೀ ಕೆ ಹೆಚ್. ಪಾಟೀಲ್.—ಸಭಾತ್ಯಾಗ ಮಾಡಿದರೆ ಏನಾಯಿತು ? ಅದೆಲ್ಲಾ ನಿಮಗೆ ಏತಕ್ಕೆ ಬೇಕು? ನೀವು ಏನೂ ಕೇಳುವುದು ಬೇಡವೆಂದು ಮಾನ್ಯ ಅಧ್ಯಕ್ಷರು ಹೇಳುವುದಾದರೆ ಬೇರೆಯವರಂತೆ ನಾವು ಅವರ ಆಜ್ಞೆಯನ್ನು ಮೀರಿ ನಿಲ್ಲುವುದಿಲ್ಲ.

ಅಧ್ಯಕ್ಷರು.—ಪಾಟೀಲ್‌ರವರೇ ನೀವು ಹಿರಿಯ ಸದಸ್ಯರು. ಇಲ್ಲಿಗೆ ಚರ್ಚೆಯನ್ನು ಮುಂಕ್ತಾಯ ಮಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಏನಾದರೂ ಮಾಡಿಕೊಳ್ಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರೂ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು.—ಬೊಮ್ಮಾಯಿಯವರೇ, ಬರಗಾಲದ ಬಗ್ಗೆ ಹೇಳಿಕೆಯನ್ನು ಮಾಡುತ್ತೇನೆ ಎಂದು ಹೇಳಿದ್ದಿರಲ್ಲ. ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ. ಬರಗಾಲದ ಬಗ್ಗೆ ನಾನು ಒಂದು ಸಮಗ್ರವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಆದನ್ನು ಈಗ ಕೊಡುತ್ತೇನೆ.

ಮಂತ್ರಿಯವರಿಂದ ಹೇಳಿಕೆ

ಬರ ಪರಿಹಾರ ಕಾರ್ಯಕ್ರಮಗಳ ವಿವರಣೆ

೪-೩೦ ಪಿ. ಯಂ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—೧೯೮೫-೮೬ ರಲ್ಲಿ ಬರ ಪರಿಸ್ಥಿತಿ

೧. ೧೯೮೫-೮೬ನೇ ಸಾಲಿನಲ್ಲಿಯೂ ಕೂಡ ನಿರಂತರವಾಗಿ ನಾಲ್ಕನೇ ವರ್ಷವೂ ಹಿಂದೆಂದೂ ಕಾಣದಂತಹ ಭೀಕರ ಬರಗಾಲ ಪರಿಸ್ಥಿತಿಯು ಉದ್ಭವಿಸಿ, ರಾಜ್ಯದ ಗ್ರಾಮೀಣ ಪ್ರದೇಶದ ರೈತಾಪಿ ಸಮುದಾಯಕ್ಕೆ ಹಾಗೂ ಜಾನುವಾರು ಸಂಪತ್ತಿಗೆ ವರ್ಣಿಸಲಾಗದ ತೊಂದರೆ ಮತ್ತು ಕಷ್ಟನಷ್ಟ ಉಂಟಾಯಿತು. ಈ ಅವಧಿಯಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಗಳೆರಡೂ ವಿಫಲವಾಗಿ ಭೀಕರ ಅಭಾವ ಪರಿಸ್ಥಿತಿ ಉದ್ಭವವಾಯಿತು. ೧೯ ಜಿಲ್ಲೆಗಳ ಪೈಕಿ ೧೮ ಜಿಲ್ಲೆಗಳಲ್ಲಿಯ ೧೪೮ ತಾಲ್ಲೂಕುಗಳಲ್ಲಿನ ೨೦,೦೦೦ ಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ಅಭಾವ ಪರಿಸ್ಥಿತಿ ಉದ್ಭವಿಸಿತು. ಇದಲ್ಲದೆ, ಬರಗಾಲ ಪೀಡಿತ ಪ್ರದೇಶದಲ್ಲಿನ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿಯೂ ಕೂಡ ಕುಡಿಯುವ ನೀರಿನ ತೀವ್ರ ಅಭಾವವಿತ್ತು. ಸುಮಾರು ೨೧.೬೯ ಲಕ್ಷ ಜನಸಂಖ್ಯೆಯು ತೊಂದರೆಗೀಡಾಯಿತು ಮತ್ತು ೧೦೯.೭೬ ಲಕ್ಷ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿಕೊಂಡವು.

ಪರಿಹಾರ ಕಾರ್ಯಕ್ರಮ

೨. ಇಂತಹ ವಿಷಮ ಪರಿಸ್ಥಿತಿಯನ್ನು ರಾಜ್ಯ ಎದುರಿಸುತ್ತಿರುವಾಗ ರಾಜ್ಯ ಸರ್ಕಾರವು ಬಡ ಕೃಷಿ ಮತ್ತು ಕೃಷಿ ಕಾರ್ಮಿಕ ಕುಟುಂಬಗಳಿಗೆ ಇಂತಹ ಕಠಿಣ ದಿನಗಳಲ್ಲಿ ತಮ್ಮನ್ನು ತಾವು ಕಾಪಾಡಿಕೊಂಡು ಹೋಗುವಷ್ಟು ಶಕ್ತಿ ದೊರಕಿಸಿಕೊಡುವ ಸಲುವಾಗಿ ಸಾಕಷ್ಟು ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿದ್ದು, ಅಲ್ಲದೆ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವುದು ಆಹಾರ ಧಾನ್ಯಗಳ ಹಾಗೂ ಮೇವು